(ಉಪ ಚುನಾವಣೆಯಲ್ಲಿ ಆಯ್ಕೆಗೊಂಡಿದ್ದ ಮಾನ್ಯ ವೈ.ಕೆ. ರಾಮಯ್ಯ, ಮಾನ್ಯ ಬಿ.ಆರ್. ಪಾಟೀಲ್ ಹಾಗೂ ಮಾನ್ಯ ಅರ್ಜುನ್‌ರಾವ್ ಹಿಪ್ಪೋಪಕರ್ ಅವರನ್ನು ಸಭೆಗೆ ಪರಿಚಯಿಸಲಾಯಿತು)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲ್ಪಟ್ಟ ವಿಷಯ

ವಿಷಯ : ವಿಧಾನಸಭಾ ಅಧಿವೇಶನದ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ತಾವು ಮುಂದಿನ ಕಾರ್ಯಕಲಾಪಗಳಿಗೆ ಹೋಗುವ ಮುಂಚೆ ನಾವು, ವಿರೋಧ ಪಕ್ಷದ ನಾಯಕರು ತಮಗೆ ಒಂದು ಸೂಚನೆ ಕಳುಹಿಸಿದ್ದೇವೆ. ಈ ಎರಡು ದಿನಗಳಿಗೆ ಮಾತ್ರ ವಿಧಾನ ಮಂಡಲದ ಅಧಿವೇಶನವನ್ನು ಕರೆಯುವ ಬದಲು ಕನಿಷ್ಠ 15 ದಿವಸಗಳಾದರೂ ಸದನವನ್ನು ಮುಂದುವರಿಸಬೇಕೆಂದು ನಾವುಗಳೆಲ್ಲಾ ನಿನ್ನೆ ದಿವಸ ರಾಜ್ಯಪಾಲರಿಗೆ ಮನವಿಯನ್ನು ಕೊಟ್ಟಿರುವುದು ಹಾಗೂ ತಮ್ಮನ್ನೂ ಸಹ ಭೇಟಿ ಮಾಡಿ ವಿಷಯವನ್ನು ತಿಳಿಸುವಂಥ ಪ್ರಯತ್ನ ಮಾಡಿದ್ದೇವೆ. ಅನೇಕ ಪ್ರಮುಖವಾದ ಸಾರ್ವಜನಿಕವಾಗಿ ಮಹತ್ವವುಳ್ಳ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದರೆ ಕೇವಲ ರಾಷ್ಟ್ರಪತಿಗಳ ಚುನಾವಣೆ ಹಿನ್ನೆಲೆಯಲ್ಲಿ ಔಪಚಾರಿಕವಾಗಿ ಈ ಅಧಿವೇಶನವನ್ನು ಕರೆಯಲಾಗಿದೆ. ಮಾನ್ಯ ಸಭಾ ನಾಯಕರು ಇಲ್ಲೇ ಇದ್ದಾರೆ. ಆದ್ದರಿಂದ, ನಾನು ಸರ್ಕಾರವನ್ನು ಕೇಳುವುದೇನೆಂದರೆ, ಅನೇಕ ಪ್ರಮುಖ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. 15–20 ದಿವಸಗಳ ಮಟ್ಟಿಗಾದರೂ ಅಧಿವೇಶನವನ್ನು ಕರೆಯಬೇಕಾಗಿತ್ತು. ಪ್ರಶ್ನೋತ್ತರ ವೇಳೆ ಇರಬೇಕಾಗಿತ್ತು. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ನಾವು ಸರ್ಕಾರದಿಂದ ಉತ್ತರವನ್ನು ಪಡೆಯಬೇಕಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನ ಮಂಡಲದೊಳಗೆ ಸರಿಯಾದ ರೀತಿ ಚರ್ಚೆಯಾಗಬೇಕಾಗಿದೆ. ಕಾವೇರಿ ಜಲವಿವಾದದ ಬಗ್ಗೆ ಟ್ರಿಬ್ಯೂನಲ್‌ನಿಂದ ಸಂಪೂರ್ಣವಾಗಿ ನಮಗೆ ಅನ್ಯಾಯವಾಗಿದೆ. ಮುಂದೆ ನಮಗೆ ನ್ಯಾಯ ಸಿಗದಂಥ ಪರಿಸ್ಥಿತಿಯಾಗಿದೆ. ನಾವು ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ಇಲ್ಲಿ ಇಡಬೇಕಾಗಿದೆ. ಅದೇ ರೀತಿ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆಗಳನ್ನು ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ.

ವಿ.ಸೂ : 10–7–92 : 12–05 (14) : ಪಿಆರ್:ಡಿಸಿ

ಅನೇಕ ಮೆಡಿಕಲ್ ಕಾಲೇಜುಗಳನ್ನು ತಾವು ಈಗಾಗಲೇ ತಮಗೆ ಬೇಕಾದವರಿಗೆ ಮಂಜೂರು ಮಾಡಿದ್ದೀರಿ. ಶಾಲೆಗಳಲ್ಲಿ ಶಿಕ್ಷಕರಿಲ್ಲ, ಶಾಲಾ ಪಠ್ಯಪುಸ್ತಕಗಳಿಲ್ಲ. ಮತ್ತೆ ಕುಣಿಗಲ್‌ನಲ್ಲಿ ಕೊಲೆ ಮೊಕದ್ದಮೆಯಲ್ಲಿ ಒಂದು ದೊಡ್ಡ ಹಗರಣವಾಗಿ ಇಡೀ ರಾಜ್ಯದ ಜನತೆ ಅತ್ತ ಕಡೆ ನೋಡುತ್ತಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ನನ್ನ ಬೆಲ್ ಎಲ್ಲಿಯೂ ಕಾಣುತ್ತಿಲ್ಲ ಮೊದಲು ಬೆಲ್ ತರಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭಾ ನಾಯಕರು ಅವಕಾಶ ಮಾಡಿಕೊಡಬೇಕು ಎನ್ನುವಂಥ ಒಂದು ಒತ್ತಾಯವನ್ನು ತರುವಂಥ ಪ್ರಯತ್ನ ಮಾಡುತ್ತಿದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ಕನ್‌ವಿನ್ಸ್ ಮಾಡುವಂಥ ಪ್ರಯತ್ನ ಇಷ್ಟೇ. ತಾವು ಸಹ ನನ್ನ ಮಾತನ್ನು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ, ವಿರೋಧ ಪಕ್ಷದಲ್ಲಿದ್ದುಕೊಂಡು ಹೊರಗಡೆ ರಾಜ್ಯಪಾಲರ ಹತ್ತಿರ ಹೋಗಿ ಒತ್ತಾಯವನ್ನು ತಂದು ಇವೊತ್ತು ಒಳಗಡೆ ಬಂದು ಸುಮ್ಮನೆ ಕುಳಿತುಕೊಂಡರೆ ಜನರು ನಮ್ಮನ್ನು ಕ್ಷಮಿಸುವುದಿಲ್ಲ.

ಸಭಾಧ್ಯಕ್ಷರು : ಯಡಿಯೂರಪ್ಪನವರೇ, ನನಗೆ ಬೆಲ್ ಇಲ್ಲದಿದ್ದರೆ ನಾನು ನಿರಾಯುಧನಾಗಿ ಹೋಗುತ್ತೇನೆ. ಆದ ಕಾರಣ ಈಗ ಆಯುಧ........

ಶ್ರೀ ವಾಟಾಳ್‌ನಾಗರಾಜ್ : ತಮಗೆ ನಾನು ಬೆಲ್ ಎಲ್ಲಿದೆಯೆಂದು ತೋರಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : ಸಂತೋಷ ಧನ್ಯವಾದಗಳು. ಯಡಿಯೂರಪ್ಪನವರೇ, ನೀವು ಹೇಳಿದ ಎಲ್ಲಾ ವಿಚಾರಗಳನ್ನು ನಾನು ಗಮನಿಸಿದ್ದೇನೆ. ಈಗ ಎರಡು ನಿಲುವಳಿ ಸೂಚನೆಗಳು ಬಂದಿವೆ. ಅವುಗಳಲ್ಲಿ ಮೊದಲನೆಯದು, ಹಕ್ಕುಬಾಧ್ಯತಾ ಸೂಚನೆ.

ಶ್ರೀ ವಾಟಾಳ್ ನಾಗರಾಜ್ : ಸದನ ಎಷ್ಟು ದಿವಸ ನಡೆಯಬೇಕೆಂಬುದರ ಬಗ್ಗೆ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಈಗ ಒಂದು ದಿನದಲ್ಲಿ ನಾವು ಅನೇಕ ಸಮಸ್ಯೆಗಳ ಬಗ್ಗೆ ಸದನದಲ್ಲಿ ಎತ್ತಬೇಕಾಗಿದೆ. ಅವುಗಳಲ್ಲಿ 'ಕಾವೇರಿ' ಸಮಸ್ಯೆಯಂತೂ ಜೀವನ್ಮರಣದ ಪ್ರಶ್ನೆಯಾಗುಳಿದಿದೆ. ಈ ಸಮಸ್ಯೆಯ ಬಗ್ಗೆ ಕನಿಷ್ಠ ಮೂರು ದಿವಸಗಳಾದರೂ ಚರ್ಚೆಯಾಗಬೇಕು. ಅದಕ್ಕೋಸ್ಕರ ನೀವು ಅವಕಾಶ ಮಾಡಿಕೊಡಬೇಕಾಗಿದೆ. ಕನಿಷ್ಠ ಹದಿನೈದು ದಿವಸಗಳಾದರೂ ತಾವು ಈ ಸದನ ನಡೆಸತಕ್ಕಂಥ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಬಿಸಿನೆಸ್ ನೋಡಿದರೆ ಸುಮಾರು 5 ವಿಧೇಯಕಗಳನ್ನು ಇವೊತ್ತು ಮಂಡನೆ ಮಾಡುವವರಿದ್ದಾರೆ. ರಾಜ್ಯಾಂಗದ ತಿದ್ದುಪಡಿ ಮಸೂದೆ ಇಲ್ಲಿ ಚರ್ಚೆಗೆ ಬರುತ್ತದೆ. ಸರ್ಕಾರದ ಮಸೂದೆಗಳನ್ನು ಚರ್ಚೆ ಮಾಡುವುದಕ್ಕೆ ನಮಗೆ ಸುಮಾರು ಕನಿಷ್ಠ ಪಕ್ಷ 5–6 ದಿವಸಗಳಾದರೂ ಬೇಕು. ಇದಾದ ನಂತರ ಸರ್ಕಾರೇತರ ರಾಜ್ಯದ ಜನರ ಸಮಸ್ಯೆಗಳಿಗೆ ರಾಜ್ಯದ ಜನರ ಸಮಸ್ಯೆಗಳು ಒಂದೆರಡಲ್ಲ, ಹಲವು ಹತ್ತು ಸಮಸ್ಯೆಗಳಿವೆ. ವಿಶೇಷವಾಗಿ ನಮ್ಮ ಹಿಂದಿನ ಅಧಿವೇಶನ ಮುಗಿದ ತಕ್ಷಣ ಕಾವೇರಿ ಜಲವಿವಾದದ ಬಗ್ಗೆ ಮಧ್ಯಂತರ ಆಜ್ಞೆಯ ಮರು ಪರಿಶೀಲನಾ ಅರ್ಜಿ ಇತ್ಯರ್ಥವಾಗಿದೆ. ಸರ್ವೋಚ್ಚ ನ್ಯಾಯಾಲಯ ಮೂರು ತೀರ್ಪುಗಳನ್ನು ಕೊಟ್ಟಿದೆ. 1991ನೇ ಇಸವಿಯಲ್ಲಿ ಡಿಸೆಂಬರ್ 81ರೊಳಗೆ ಜಿಲ್ಲಾ ಪರಿಷತ್ತಿನ ಮಸೂದೆ ಜಾರಿಗೆ ಕೊಟ್ಟು ಅದರ ಚುನಾವಣೆಯಾಗಬೇಕೆಂದು ಇದೆ. ಅದರ ಬಗ್ಗೆ ಸರ್ಕಾರದ ಚಿಂತನೆ ಏನೂ ಕಾಣುತ್ತಿಲ್ಲ. ಉಚ್ಚ ನ್ಯಾಯಾಲಯ ಏಪ್ರಿಲ್ 13ನೇ ತಾರೀಖಿನಂದು ಮತ್ತೊಂದು ತೀರ್ಪನ್ನು ಕೊಟ್ಟಿದೆ. ಅದೇನೆಂದರೆ, ರಾಜ್ಯ ಸರ್ಕಾರ 203 ಗ್ರಾನೈಟ್ ಲೈಸೆನ್ಸ್‌ಗಳನ್ನು ಕೊಟ್ಟಿರತಕ್ಕಂಥಾದ್ದು ಶಾಸನಬಾಹಿರ ಎಂದು ಹೇಳಿದ್ದಾರೆ. ಮತ್ತು ಏಪ್ರಿಲ್ 24ನೇ ತಾರೀಖಿನಂದು ಮತ್ತೊಂದು ತೀರ್ಪು ಕೊಟ್ಟು ಕಾನೂನು ಬಾಹಿರವಾಗಿ ಟಿ.ಜಿ. ಹಳ್ಳಿ (ತಿಪ್ಪಗೊಂಡನಹಳ್ಳಿ)ಯಲ್ಲಿ 414 ಎಕರೆ ಪ್ರದೇಶವನ್ನು ದೆಹಲಿಯ ಮಾಲೀಕರಿಗೆ ಕೊಟ್ಟಿದ್ದೀರಿ ಎನ್ನತಕ್ಕಂಥಾದ್ದರ ಬಗ್ಗೆ ತೀರ್ಪು ಬಂದಿದೆ. ಹೀಗೆ ಒಂದು ಕಡೆ ಕೋರ್ಟಿನ ತೀರ್ಪುಗಳಿವೆ, ಇನ್ನೊಂದು ಕಡೆ ಯಾವ ಸರ್ಕಾರದಿಂದ ನಾವು ರಕ್ಷಣೆಯನ್ನು ನಿರೀಕ್ಷೆ ಮಾಡಿದ್ದೇವೋ, ಆ ಸರ್ಕಾರದಿಂದ ಕೊಲೆ ನಡೆಯುತ್ತಿದೆ. ಅತ್ತ ಕಡೆ ರಾತ್ರಿ ವೀರಪ್ಪನ್ ಐದು ಜನ ಪೊಲೀಸ್ ಅಧಿಕಾರಿಗಳನ್ನು ಕೊಂದಿದ್ದಾನೆ. ಅದಾದ ನಂತರ ಪೊಲೀಸರು, ಅಮಾಯಕರಾದ 4 ಜನರನ್ನು ಕೊಂದಿದ್ದಾರೆ. ಎನ್ನತಕ್ಕಂಥ ಸುದ್ದಿ ಬಂದಿದೆ. ಮತ್ತೊಂದು ಕಡೆ ಗುಲ್ಬರ್ಗಾ, ಬಿಜಾಪುರ, ಬೀದರ್ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂತಹ ಸಮಸ್ಯೆಗಳ ಜೊತೆಗೆ ಈ ರಾಜ್ಯ ಸರ್ಕಾರ ನಡೆದುಕೊಂಡಿರತಕ್ಕ ಕೆಲವಾರು ವಿಚಾರಗಳನ್ನು ನಾವು ಕೋರ್ಟ್‌ಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ಶಾಸನ ಸಭಾ ಅಧಿವೇಶನ ಸೇರುವುದಿಲ್ಲ, ಅಧಿವೇಶನ ಸೇರಿದರೆ ಒಂದು ದಿವಸ ಸೇರುತ್ತದಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಇಲ್ಲ, ಬರಗಾಲದ ಛಾಯೆ ಇದೆ. ರೈತರ ಸ್ಥಿತಿ ಏನಾಗುತ್ತದೋ ಇನ್ನೂ ಗೊತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಸಭೆ ಸೇರಿದ ಶಾಸ್ತ್ರ ಮಾಡಿ ಮನೆಗೆ ಹೋಗುವಂತಾದರೆ ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನೀವು ನನಗಿಂತಲೂ ಅಥವಾ ಬಹುತೇಕ ಇತರ ಶಾಸಕರಿಗಿಂತ ಹಿರಿಯ ಸಂಸದೀಯ ವ್ಯವಹಾರದ ಜ್ಞಾನ ಇರತಕ್ಕಂಥವರು. ಈ ಶಾಸನ ಸಭೆಯ ಅಸ್ತಿತ್ವಕ್ಕೇನಾದರೂ ಬೆಲೆ, ಗೌರವ ಇದ್ದರೆ, ಜನತಂತ್ರದಲ್ಲಿ ನಿಮಗೆ ವಿಶ್ವಾಸವಿದ್ದರೆ, ಈ ಶಾಸನ ಸಭೆಯ ಮೂಲಕ ಅವರು ಜನಾಭಿಪ್ರಾಯವನ್ನು ರೂಪಿಸಿ ಅಭಿವ್ಯಕ್ತ ಮಾಡತಕ್ಕಂಥ ಸ್ವಾತಂತ್ರ್ಯ ನಿಮಗೆ ನಿಜವಾಗಿ ರಾಜ್ಯಾಂಗದತ್ತವಾದ ಹಕ್ಕಾಗಿ ಬಂದಿದ್ದರೆ ಏನಾದರೂ ಒಂದು ಮಾಡಬಹುದು. ಇದೊಂದು

ರೀತಿಯ ಪ್ರಹಸನವಾಗಿದೆ. ರಾಜ್ಯದಲ್ಲಿನ ಈ ಪ್ರಹಸನ ನಿಲ್ಲಬೇಕು. ನಾವು ಅನೇಕ ಸಾರಿ ಪತ್ರಿಕೆಗಳ ಮೂಲಕ ಕೇಳಿದ್ದೇವೆ, ಹೇಳಿದ್ದೇವೆ.

ಡಾ. ಜೀವರಾಜ ಆಳ್ವ : ಈ ಪ್ರಹಸನದ ಬಗ್ಗೆ ಮಾತನಾಡುವುದಕ್ಕೆ ನನಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಯಾರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿಲ್ಲ. ನನಗೆ ಹೇಳುವ ಹಕ್ಕಿರುವುದರಿಂದ, ನಾನು ಹೇಳುತ್ತೇನೆ. ಆದುದರಿಂದ ಮಾನ್ಯ ಅಧ್ಯಕ್ಷರಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಈ ರಾಜ್ಯದ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಸ್ವಾಮಿ, ಕೆ.ಜಿ.ಗೆ 220 ರೂಪಾಯಿ ಇದ್ದಂಥ ರೇಷ್ಮೆ ಬೆಲೆ ಇವೊತ್ತು 40–50 ರೂಪಾಯಿಗಳಿಗೆ ಇಳಿದಿದೆ.

ಇಂಥ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದಕಾರಣ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಹಾಗೂ ತಮ್ಮ ಮೂಲಕ ಸರಕಾರವನ್ನು ಒತ್ತಾಯಪಡಿಸುವುದೇನೆಂದರೆ, ಈ ಶಾಸನ ಸಭೆಯ ಅಧಿವೇಶನದ ಅವಧಿಯನ್ನು ದಯಮಾಡಿ ಮುಂದುವರಿಸಬೇಕು.......

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ತಾವುಗಳು ಅನೇಕ ಸಲ ಅನೇಕ ಕಡೆಗಳಲ್ಲಿ ಹೇಳಿರುವ ಪ್ರಕಾರ ರಾಜ್ಯದ ಶಾಸನಸಭೆಯು ವರ್ಷದಲ್ಲಿ ಕನಿಷ್ಠ ಪಕ್ಷ 100 ದಿವಸಗಳಾದರೂ ನಡೆಯಬೇಕು. ಹೀಗೆ ತಾವುಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಇವೊತ್ತು ಈ ಸಭೆಯು ವರ್ಷದಲ್ಲಿ ಕೇವಲ 35 ದಿವಸಗಳು ನಡೆಯುವುದಾದರೆ ಈ ಸಭೆಯ ಮಹತ್ವಕ್ಕೆ ಕುಂದು ಬರುತ್ತದೆ. ಜನರ ಸಮಸ್ಯೆಗಳನ್ನು ನಾವು ಇಲ್ಲಿ ಹೇಳಿಕೊಳ್ಳಬೇಕಾದ ಅವಕಾಶವು ನಮಗೆ ಕಡಿಮೆಯಾಗಿ ಸಮಸ್ಯೆಗಳು ಉಳಿದುಕೊಳ್ಳುತ್ತವೆ. ಮತ್ತು ಜನರ ವಿಶ್ವಾಸಾರ್ಹ ಗಾಂಭೀರ್ಯ ಉಳಿಯಬೇಕಾದರೆ ಈ ಸಭೆಯನ್ನು ಮೂರು ದಿವಸಗಳ ಅವಧಿಗಾದರೂ ಮುಂದುವರಿಸುವ ವ್ಯವಸ್ಥೆಯನ್ನು ತಾವುಗಳು ದಯವಿಟ್ಟು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಸರ್ಕಾರವನ್ನು ಕೂಡ ತಮ್ಮ ಮೂಲಕ ಒತ್ತಾಯಪಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸಂದರ್ಭದಲ್ಲಿ ಸರಕಾರದವರ ಸೌಜನ್ಯದ ಬಗ್ಗೆ ಹೇಳಬೇಕಾಗಿದೆ. ವಿರೋಧ ಪಕ್ಷದ ನಾಯಕರಿಗೆ ಬಿಎಸಿ ಮೀಟಿಂಗ್ ಕರೆಯುತ್ತೇವೆ ಎಂದು ತಿಳಿಸುವ ಒಂದು ಸೌಜನ್ಯವನ್ನು ಕೂಡ ತೋರಿಸಿಲ್ಲ. ಆ ಬಗ್ಗೆ ಸೂಚನೆಯನ್ನಾಗಲೀ, ವಿಷಯವನ್ನಾಗಲೀ ನಮಗೆ ತಿಳಿಸಿಲ್ಲ. ಈ ವಿಚಾರದಲ್ಲಿ ನಾನು ತಮ್ಮ ಬಗ್ಗೆ ಮಾತನಾಡುತ್ತಾ ಇಲ್ಲ. ತಾವುಗಳು ನಮಗೆ ಕೊಟ್ಟಂಥ ಆದೇಶಕ್ಕೆ ಬದ್ಧರಾಗಿ ನಾವು ಕೆಲಸ ಮಾಡುತ್ತೇವೆ. ಹೀಗೆ ಆದರೆ ಅದು ಒಂದು ರೀತಿಯ ದುರಂತಕ್ಕೆ ಸಿಕ್ಕಹಾಗೆ ಆಗುತ್ತದೆ. ಆದ್ದರಿಂದ ಇವೇ ಮುಂತಾಗಿ ಎಲ್ಲಾ ವಿಷಯಗಳ ಮೇಲೆ ಚರ್ಚೆ ಮೂಲಕ ಬೆಳಕನ್ನು ಚೆಲ್ಲುವುದಕ್ಕೆ ತಾವುಗಳು ಕಾಲಾವಕಾಶವನ್ನು ಒದಗಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಕಳೆದ ಬಜೆಟ್ ಅಧಿವೇಶನದಲ್ಲಿಯೂ ನಮಗೆ ಸರಕಾರದ ಧೋರಣೆಯ ಬಗ್ಗೆ, ಬಜೆಟ್ ಮೇಲೆ ಮಾತನಾಡಲು, ಚರ್ಚೆ ಮಾಡಲು ಸಾಕಷ್ಟು ಅವಕಾಶ ಆಗಲಿಲ್ಲ. ಕಳೆದ 6–7 ತಿಂಗಳುಗಳಲ್ಲಿ ಸರಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ವೈಖರಿಯು ಯಾವ ಧಾಟಿಯಲ್ಲಿ ನಡೆಯುತ್ತಾ ಇದೆ, ಯಾವ ರೀತಿಯಲ್ಲಿ ಅವುಗಳು ಕೆಲಸ ಮಾಡುತ್ತಾ ಇವೆ ಎಂಬ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ನಾವು ಇಲ್ಲಿ ಕೊಡಬೇಕಾಗುತ್ತದೆ. ರಾಯಚೂರು, ಗುಲಬರ್ಗ, ಬಿಜಾಪುರ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿಯು ಬಂದಿರತಕ್ಕಂಥ ಸಂದರ್ಭದಲ್ಲಿ ನಾವುಗಳು ಶಾಸ್ತ್ರಕ್ಕೋಸ್ಕರವಾಗಿ ಎರಡು ದಿವಸಗಳ ಕಾಲ ಸಭೆ ಸೇರಿ ಚರ್ಚೆ ಮಾಡಿ ವಾಪಸ್ಸು ಹೋದರೆ ನಮ್ಮ ಸ್ಥಿತಿಯು ಜನರ ಮುಂದೆ ಏನಾಗುತ್ತದೆ ಎಂಬ ಬಗ್ಗೆ ನಾವು ಯೋಚಿಸಬೇಕಾಗುತ್ತದೆ. ನಿಜ, ತಾವುಗಳು ಕರೆದಂಥ ಬಿಎಸಿ ಮೀಟಿಂಗ್‌ನಲ್ಲಿ ನಾವುಗಳು ಚರ್ಚೆ ಮಾಡಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಈ ವಿಚಾರದ ಬಗ್ಗೆ ಒತ್ತಾಯ ಮಾಡುವುದೇನೆಂದರೆ, ಈ ಸಭೆಯನ್ನು ಕೆಲವು ದಿನಗಳ ಮಟ್ಟಿಗೆ ಮುಂದುವರಿಸಲು ಅವಕಾಶ

ಮಾಡಿಕೊಡಬೇಕು. ತಾವುಗಳು ಈ ಬಗ್ಗೆ ದಯಬಿಟ್ಟು ಪರಿಶೀಲನೆ ಮಾಡಿ ಕಾರ್ಯಕಲಾಪಗಳು ಹೆಚ್ಚು ದಿನ ನಡೆಸಲು ಅವಕಾಶ ಮಾಡಿಕೊಡಬೇಕು. ಒಂದು ವೇಳೆ ನಾವುಗಳು ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೇ ಹಾಗೆ ಸಭೆಯನ್ನು ಮುಂದಕ್ಕೆ ಹಾಕಿ ಹೋದರೆ ನಮ್ಮ ಬಗ್ಗೆ ಜನರಿಗೆ ಎಷ್ಟು ಗೌರವ ಬರುತ್ತದೆ ಎಂಬುದನ್ನು ನೋಡಬೇಕು. ಈಗ ತಾವುಗಳು ಕೈಗೊಂಡ ತೀರ್ಮಾನದ ಪ್ರಕಾರ ಎರಡು ದಿನಗಳ ಸಭೆಯನ್ನು ನಡೆಸುವ ನಿರ್ಣಯವನ್ನು ಮರುಪರಿಶೀಲನೆ ಮಾಡಬೇಕು. ಮತ್ತು ಇನ್ನೂ ಕೆಲವು ದಿವಸಗಳ ಕಾಲ ಸಭೆಯನ್ನು ನಡೆಸುವ ಬಗ್ಗೆ ಮರುಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಲವಾರು ಜನರ ಸಮಸ್ಯೆಗಳು ಇವೆ. ಅದು ಕಾವೇರಿ ವಿಚಾರದಲ್ಲಿ ಇರಬಹುದು, ಬರಗಾಲದ ಸಮಸ್ಯೆಯ ಬಗ್ಗೆ ಇರಬಹುದು. ಇಂಥ ಹಲವಾರು ವಿಚಾರಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಇಲ್ಲಿ ನಾವುಗಳು ಚರ್ಚೆ ಮಾಡಬೇಕಾಗಿರುವುದರಿಂದ ದಯಬಿಟ್ಟು ಮಾನ್ಯ ಅಧ್ಯಕ್ಷರು ಅಧಿವೇಶನದ ಅವಧಿಯನ್ನು ಹೆಚ್ಚು ಮಾಡುವಲ್ಲಿ ಸರಕಾರದ ಮನಸ್ಸನ್ನು ಒಲಿಸಬೇಕಾಗಿ ಕೇಳಿಕೊಳ್ಳುತ್ತೇನೆ.

+ ಶ್ರೀ ಸಿ. ಬೈರೇಗೌಡ : (ವೇಮಗಲ್) ಅಧ್ಯಕ್ಷರೇ, ನಾವು ತಿಳಿದುಕೊಂಡಿರುವ ಹಾಗೆ ಸೋಮವಾರ ದಿನದಂದು ರಾಷ್ಟ್ರಪತಿಯವರ ಚುನಾವಣೆಯು ನಡೆಯುತ್ತದೆ. ನಾವುಗಳು ನಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕಾಗಿದೆ. ಅದಕ್ಕೆ ಅವಕಾಶ ಮಾಡಿಕೊಡುವುದಕ್ಕಾಗಿ ಈ ಸಭೆಯನ್ನು ಕರೆಯಲಾಗಿದೆ ಎಂದು ಜನತೆಯು ಕೂಡ ಹೊರಗೆ ಮಾತನಾಡುತ್ತಾ ಇದ್ದಾರೆ. ಚುನಾವಣೆಯಲ್ಲಿ ಮತವನ್ನು ಚಲಾಯಿಸುವ ಹಕ್ಕು ನಮ್ಮದ್ದು ಇದೆ. ಅದನ್ನು ನಾವು ಮಾಡುತ್ತೇವೆ. ಈ ಸಭೆಯನ್ನು ಕರೆದಿರತಕ್ಕಂಥ ಉದ್ದೇಶ ಏನೆಂದರೆ, ಸಂಬಂಧಪಟ್ಟ ಎಲ್ಲಾ ಸದಸ್ಯರುಗಳು ಕೂಡ ತಮ್ಮ ಕ್ಷೇತ್ರವನ್ನು ಬಿಟ್ಟು ಬೆಂಗಳೂರಿಗೆ ಬರಬೇಕು, ಹಾಗೆ ಬರುವಾಗ ಅವರಿಗೆ ಟಿಎ/ಡಿಎ ಬರಬೇಕೆಂಬ ಉದ್ದೇಶಕ್ಕಾಗಿ ಅವರ ಮೇಲೆ ಕರುಣೆ ತೋರಿಸಿ ಅದಕ್ಕಾಗಿ ಈ ಸಭೆಯನ್ನು ಕರೆದ ಹಾಗೆ ಇದೆ. ಆದರೆ ನಾವು ಯಾರೂ ಕೂಡ ಟಿಎ/ಡಿಎಗಾಗಿ ಬಂದಿಲ್ಲ. ಇವೊತ್ತು ರಾಜ್ಯದಲ್ಲಿರತಕ್ಕಂಥ ಭೀಕರವಾದಂಥ ಸಮಸ್ಯೆಗಳು ಏನಿವೆ ಅವುಗಳನ್ನು ಸರಕಾರದ ಗಮನಕ್ಕೆ ತರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅದನ್ನು ನೆರವೇರಿಸಲು ನಾವು ಸದಸ್ಯರಾಗಿ ಇಲ್ಲಿಗೆ ಬಂದಿದ್ದೇವೆ. ನಮ್ಮ ಮತದಾರರ ರಕ್ಷಣೆ ಮಾಡುವುದಕ್ಕೋಸ್ಕರವಾಗಿ ನಾವು ಇಲ್ಲಿದ್ದೇವೆ. ಆ ಕೆಲಸವನ್ನು ಮಾಡಲು ಬಂದಿರತಕ್ಕಂಥ ನಾವುಗಳು ಅದನ್ನು ಮಾಡುವುದನ್ನು ಬಿಟ್ಟು ಔಪಚಾರಿಕವಾದಂಥ ಈ ಒಂದೆರಡು ದಿನಗಳ ಸಭೆಗೆ ಬಂದು ನಮ್ಮನ್ನು ಕೈಗೊಂಬೆಯಾಗಿ ಮಾಡುವಂಥ ಒಂದು ಪರಿಸ್ಥಿತಿಗೆ ದೂಡಿರತಕ್ಕಂಥಾದ್ದು ವಿಷಾದಕರವಾದುದು ಎಂದು ಹೇಳಬೇಕಾಗಿದೆ.

ಇವತ್ತು ಈ ರಾಜ್ಯದಲ್ಲಿ ಭೀಕರವಾದ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಸರ್ಕಾರದ ಗಮನಕ್ಕೆ ತರಬೇಕಾದ್ದು ಹಾಗೂ ಜನರ ಮುಂದೆ ಇಡಬೇಕಾದುದು ನಮ್ಮ ಕರ್ತವ್ಯ. ಅದನ್ನು ನೆರವೇರಿಸುವುದಕ್ಕಾಗಿ ನಾವು ಇಲ್ಲಿ ಸದಸ್ಯರಾಗಿದ್ದೇವೆ. ನಮ್ಮ ಮತದಾರರ ರಕ್ಷಣೆ ಮಾಡುವುದಕ್ಕಾಗಿ ನಾವು ಇಲ್ಲಿ ಸದನದಲ್ಲಿದ್ದೇವೆ. ಆ ಕೆಲಸ ಮಾಡಲಿಕ್ಕೆ ನಾವು ಬಂದಿರುವಾಗ ನಮಗೆ ಟಿಎ/ಡಿಎ ಆಸೆ ತೋರಿಸಿ ಔಪಚಾರಿಕವಾದ ಒಂದು ಸಭೆ ಕರೆದು ಈ ಸಭೆಯನ್ನು ಸರ್ಕಾರ ಇಂದು ತನ್ನ ಕೈಗೊಂಬೆ ಮಾಡಿಕೊಳ್ಳುವ ಪರಿಸ್ಥಿತಿಗೆ ಈ ಸದನವನ್ನು ದೂಡಿರುವುದು ಅತ್ಯಂತ ವಿಷಾದಕರ. ಇವತ್ತು ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆಯೆಂದರೆ ಎಂದೂ ಇಲ್ಲದ ಗೋಳಿಗೆ ಇವತ್ತು ರೈತರು ಒಳಗಾಗಿದ್ದಾರೆ. ಬೆಳೆದಂಥ ಬೆಳೆ ಯಾವು ಯಾವುದಿತ್ತೋ ಅದನ್ನೆಲ್ಲ ಮೊನ್ನೆ ನಡೆದ ಲಾರಿ ಮುಷ್ಕರದಿಂದ ತಿಪ್ಪೆಗೆ ಹಾಕಿರುವ ನಿದರ್ಶನ ಪ್ರತಿ ಹಳ್ಳಿಯಲ್ಲೂ ಇಂದು ನಡೆದಿದೆ. ಬೆಳೆದ ತರಕಾರಿಗಳಿಗೆ ಬೆಲೆ ಇಲ್ಲ; ಕಾಯಿಪಲ್ಲೆಗಳಿಗೆ ಬೆಲೆಯಿಲ್ಲ. ಎಲ್ಲ ಸರ್ವನಾಶವಾದ ಪರಿಸ್ಥಿತಿಯಲ್ಲಿ ಇಂದು ರೈತವರ್ಗ ಇದೆ. ಇನ್ನು ಈ ರಾಜ್ಯದ ಅನೇಕ ಜಿಲ್ಲೆಗಳ ಪ್ರಮುಖ ಬೆಳೆ ರೇಷ್ಮೆ. ಒಂದು ಕೆಜಿ ರೇಷ್ಮೆಗೂಡಿಗೆ 200ರಿಂದ 220ರೂವರೆಗೆ ಇದ್ದದ್ದು ಇವತ್ತು ಕೇವಲ ರೂ. 60–70ಕ್ಕೆ ಇಳಿದಿದೆ. ಇದರಿಂದಾಗಿ ಇಂದು ರೇಷ್ಮೆ ಬೆಳೆಗಾರರೆಲ್ಲ ಸರ್ವನಾಶವಾಗಿದ್ದಾರೆ. ಅದರ ಜೊತೇಲಿ ಇಂದು ಕೇಂದ್ರ ಸರ್ಕಾರ ಕಣ್ಮುಚ್ಚಿ ಹೊರದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಂಡು ರೇಷ್ಮೆ ಬೆಳೆಗಾರರನ್ನು ನೆಲಸಮ ಮಾಡುವ ಕೆಲಸ ಇಂದು ಕೇಂದ್ರ ಸರ್ಕಾರದಿಂದ ನಡೆದಿದ್ದರೂ ಕರ್ನಾಟಕ ಸರ್ಕಾರ ಕಣ್ಮುಚ್ಚಿ ಕುಳಿತಿರುವ

ನಿದರ್ಶನ ನಮ್ಮ ಮುಂದಿದೆ. ಹಾಲು ಉತ್ಪಾದಕರು ಹೊರ ರಾಜ್ಯಗಳಿಗೆ ಹಾಲು ಮಾರಾಟ ಮಾಡುತ್ತಿದ್ದಾರೆ. ಅದಕ್ಕೆ ಕಾರಣವೇನೆಂದರೆ ಅವರ ಹಾಲಿಗೆ ಯೋಗ್ಯ ಬೆಲೆ ಸಿಗುತ್ತಿಲ್ಲ. ಕೆಲವರು ಹಸುಗಳನ್ನು ಹೊರರಾಜ್ಯದವರಿಗೆ ಮಾರುತ್ತಿದ್ದಾರೆ. ಅವರ ರಕ್ಷಣೆಗೆ ಸರ್ಕಾರ ಬರುವ ಪರಿಸ್ಥಿತಿಯಲ್ಲಿಲ್ಲ. ಇದೇ ರೀತಿ ಇವತ್ತು ರಾಜ್ಯದಲ್ಲಿ ಕಾನೂನಿನ ವ್ಯವಸ್ಥೆಯಂತೂ ಇಲ್ಲವೇ ಇಲ್ಲ. ಯಾರು ಯಾರನ್ನು ಬೇಕಾದರೂ ಬಂದೂಕದಿಂದ ಹೊಡೆದು ಸಾಯಿಸುವ ಪರಿಸ್ಥಿತಿಗೆ ಬಂದು ಮುಟ್ಟಿದೆ. ಒಂದು ಕೊಲೆ ಕೇಸಿನಲ್ಲಿ ಇಂದು ಎಫ್‌ಐಆರ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆದ ತಕ್ಷಣ ಅಪಾದಿತನನ್ನು ದಸ್ತಗಿರಿ ಮಾಡಬೇಕೆಂದು ಕಾನೂನು ಹೇಳುತ್ತದೆ. ಆದರೆ ಕೆಲವು ಜನರು, ಅವರು ಆಡಳಿತ ಪಕ್ಷಕ್ಕೆ ಸೇರಿದ್ದರೆ ಅವರಿಗೆ ಯಾವ ಕಾನೂನೂ ಅನ್ವಯವಾಗುತ್ತಿಲ್ಲ. ಕಾನೂನನ್ನು ಹರಿದುಬಿಸಾಕುವಂಥ ಪರಿಸ್ಥಿತಿ ರಾಜ್ಯದಲ್ಲಿ ಇಂದು ಉಂಟಾಗಿದೆ. ಇಂದು ನಮ್ಮ ರಾಜ್ಯದ ಕಲ್ಲು ಮಣ್ಣು ಜಲ ಭೂಮಿಗಳಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ ಉಂಟಾಗಿದೆ. ಕಾವೇರಿ ಪರಿಸ್ಥಿತಿ ಏನಾಗಿದೆ ಇಂದು? ಅದು ಈ ರಾಜ್ಯದ ರೈತನ ಜೀವನ್ಮರಣದ ಪ್ರಶ್ನೆಯಾಗಿದೆ.

ಈ ವಿಚಾರದಲ್ಲಿ ಈ ಸದನದ ತೀರ್ಮಾನ ಒಂದಾಗಿದ್ದರೆ ಇವತ್ತು ಸರ್ಕಾರ ಮಾಡುವ ತೀರ್ಮಾನ ಮತ್ತೊಂದಾಗಿದೆ. ಈ ಎಲ್ಲ ವಿಷಯವನ್ನೂ ಚರ್ಚೆ ಮಾಡಬೇಕೆಂದರೆ ಇಲ್ಲಿ ಅವಕಾಶವಿಲ್ಲ. ಬನ್ನಿ, ನೀವು ಟಿಎ:ಡಿಎ ತೆಗೆದುಕೊಂಡು ಎರಡು ದಿವಸ ಮಾತ್ರ ಕೂತುಕೊಳ್ಳಿ. ಆಮೇಲೆ ಹೋಗಿ ಎಂದರೆ ಆಡಳಿತ ಪಕ್ಷದ ಹಾಗೂ ಈ ಸದನದ ಸಭಾ ನಾಯಕರ ಅಡಿಯಾಳಾಗಿ ನಾವ್ಯಾರೂ ಇಲ್ಲಿಗೆ ಬಂದಿಲ್ಲ. ಜನರ ಅಡಿಯಾಳಾಗಿ ನಾವು ಬಂದಿರೋದು. ಜನರ ಕೆಲಸ ಮಾಡುವುದಕ್ಕೆ ಬಂದಿದ್ದೇವೆ. ಆದ್ದರಿಂದ, ಜನರ ಕೆಲಸಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಭಾ ನಾಯಕರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಆಡಳಿತದಲ್ಲಿ ಒಂದು ನೀತಿ ನಿಯಮ ಇಲ್ಲದೆ ಒಂದು ರೀತಿಯ ಸರ್ವಾಧಿಕಾರ ಈ ರಾಜ್ಯದಲ್ಲಿ ನಡೆಯುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಬೈರೇಗೌಡರು ವಿದೇಶಕ್ಕೆ ಹೋಗೋಕೆ ಸಿದ್ಧತೆ ಮಾಡಿಕೊಂಡಿದ್ದರು. ಈ ಶಾಸನಸಭೆ ಇದ್ದರೂ ಹೋಗಬೇಕೆಂದಿದ್ದವರು ಈಗ ಕಾಲಾವಕಾಶ ಬೇಕೊಂತ ಹೇಳ್ತಾರೆ; ಇದು ನನಗೆ ಆಶ್ಚರ್ಯವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಜನರ ಪರಿಸ್ಥಿತಿ ನೋಡಿ, ಅವರು ವಿದೇಶಕ್ಕೆ ಹೋಗೋದನ್ನು ನಿಲ್ಲಿಸಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಏತಕ್ಕೆ ವಿದೇಶಕ್ಕೆ ಹೋಗಬೇಕೆಂದಿದ್ದೇನೆಂಬುದು ನನ್ನ ಆತ್ಮೀಯ ಸ್ನೇಹಿತರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಗೊತ್ತಿದೆ. ಅವರೂ ಕೂಡ ನನಗೆ ಸಹಾಯ ಮಾಡಿದ್ದಾರೆ. ಆಗ ಹೋಗಬೇಕೆಂದಿದ್ದಾಗ ಯಾವ ಸಮಾವೇಶವೂ ಇರಲಿಲ್ಲ, ಆಗ ಹೋಗಬೇಕೆಂದಿದ್ದೆ. ಆದರೆ ಸಾಧ್ಯವಾಗಲಿಲ್ಲ. ಆದರೆ, ಈಗ ಆ ಕೆಲಸ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ವಕೀಲರೆಲ್ಲಾ ಹೈಕೋರ್ಟಿನ ಮುಂದೆ ಧರಣಿ ಕುಳಿತಿದ್ದಾರೆ. ಸತ್ಯಾಗ್ರಹ ಮಾಡ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಏನು ಹೇಳಿಲ್ಲ. ನೀತಿ–ನಿಯಮ ಇಲ್ಲದೆ ಆಡಳಿತ ನಡೆಯುತ್ತಿದೆ. ಹೊಸ ಮೆಡಿಕಲ್ ಕಾಲೇಜುಗಳಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಒಂದು ಹೈಸ್ಕೂಲಿಗೆ ಪರ್ಮಿಷನ್ ಕೊಡಬೇಕಾದರೆ ಭೂಮಿ ಇದೆಯೋ, ಬಿಲ್ಡಿಂಗ್ ಇದೆಯಾ, ಲೈಸೆನ್ಸ್ ಇದೆಯಾ ಅಂತ ನೋಡುತ್ತಾರೆ. ಆದರೆ, ಮೆಡಿಕಲ್ ಕಾಲೇಜುಗಳಿಗೆ ಇದನ್ನೆಲ್ಲಾ ನೋಡುತ್ತಿಲ್ಲ. ಎಲ್ಲಾ ವಿಚಿತ್ರವಾಗಿ ನಡೀತಿದೆ; ಹೇಳೋರಿಲ್ಲ, ಕೇಳೋರಿಲ್ಲ. ಈ ಎಲ್ಲದರ ಬಗ್ಗೆಯೂ ಇಲ್ಲಿ ಚರ್ಚೆಯಾಗಬೇಕಾಗಿದೆ.

12.20 ಪಿ.ಎಂ.

ಪ್ರೊ। ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೇ, ಈ ಸದನದ ಕಾರ್ಯಕಲಾಪಗಳು ಯಾವರೀತಿ ಅರ್ಥಪೂರ್ಣವಾಗಿ ನಡೆಯಬೇಕು ಹಾಗೆ ನಡೆಸುವುದಕ್ಕೆ ನಾವು ಯಾವ ರೀತಿ ಕಾರ್ಯಕ್ರಮ ಹಾಕಬೇಕೆಂಬುದರಲ್ಲಿ ಈ ಸದನದ ಸಭಾನಾಯಕರ ಜವಾಬ್ದಾರಿಯೂ ಇದೆ. ಅದಕ್ಕಿಂತ ಹೆಚ್ಚಾಗಿ ನನಗೆ ತಿಳಿದ ಹಾಗೆ ಅದು ತಮ್ಮ ಜವಾಬ್ದಾರಿ ಸಹ ಆಗಿದೆ. ಈ ವರ್ಷದ ಬಜೆಟ್ ಅಧಿವೇಶನದ ಬಗ್ಗೆ ನಾನು ಮಾತನಾಡುತ್ತಿಲ್ಲ. ಕಳೆದ ವರ್ಷದ ಬಜೆಟ್ ಅಧಿವೇಶನದಿಂದ ಈಚೆಗೆ ಈ ಸದನ ದುರದೃಷ್ಟವಶಾತ್ ಜನಗಳ ದೃಷ್ಟಿಯಲ್ಲಿ ನಗೆಪಾಟಲಿಗೆ ಈಡಾಗಿದೆ. ನಮ್ಮ ಸದನದ ನಿಯಮಗಳ ಪ್ರಕಾರವೇ ಹಾಗೂ ನಾವು ಯಾವ ಸದನವನ್ನು ಅನುಕರಣೆ ಮಾಡುತ್ತಿದ್ದೇವೆ ಅಂದರೆ ಹೌಸ್ ಆಫ್ ಕಮನ್ಸ್‌ದ್ದು, ಅಲ್ಲಿಯ ನಿಯಮಾವಳಿಗಳ ಪ್ರಕಾರ ಒಂದು ದಿವಸದಲ್ಲಿ ಒಂದು ಸಚಿವಾಲಯದ, ಎರಡು ಖಾತೆಗಿಂತಲೂ ಹೆಚ್ಚಾಗಿ ಬಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡಬಾರದು ಎಂದು ನಿಯಮ ಇದೆ. ಆದರೆ ಕಳೆದ ವರ್ಷದಿಂದ ನಾವು ಏನು ಮಾಡುತ್ತಿದ್ದೇವೆ, ನಾಲ್ಕು ನಾಲ್ಕು ಸಚಿವಾಲಯದ ಎಲ್ಲಾ ಖಾತೆಗಳ ಒಟ್ಟು ಚರ್ಚೆಯನ್ನು ಒಂದೊಂದೇ ದಿವಸದಲ್ಲೇ ಮಾಡಿದ್ದೇವೆ. ನನ್ನ ದೃಷ್ಟಿಯಲ್ಲಿ ಕಳೆದ ಬಜೆಟ್ ಅಧಿವೇಶನದಲ್ಲಿ ನಡೆದಂಥ ನಡವಳಿಕೆಗಳು ಏನಿವೆ, ಅದು ಯಾವುದೇ ಸಂಸದೀಯ ನಡವಳಿಕೆಯ ಚೌಕಟ್ಟಿನಲ್ಲಿ ಬರುವಂಥ ಚಟುವಟಿಕೆ ಅಲ್ಲವೇ ಅಲ್ಲ. ಅದರ ಜೊತೆಗೆ ನಾನು ತಮಗೆ ಕೆಲವು ಅಂಕಿ ಅಂಶಗಳನ್ನು ನೆನಪು ಮಾಡಿಕೊಡುತ್ತೇನೆ. 1970ರ ದಶಕದಲ್ಲಿ ಈ ಸದನ 90 ದಿವಸಕ್ಕೂ ಹೆಚ್ಚಾಗಿ ಕೆಲಸವನ್ನು ಮಾಡಿದೆ. 70ರ ದಶಕದಲ್ಲಿ ಎಷ್ಟು ಸರ್ಕಾರದ ಚಟುವಟಿಕೆ ಇತ್ತೋ ಅದು ನಾಲ್ಕು ಪಟ್ಟು ಚಟುವಟಿಕೆ ಈಗ 90ರ ದಶಕದಲ್ಲಿ ಜಾಸ್ತಿಯಾಗಿದೆ. ನಿಮ್ಮ ಬೊಕ್ಕಸದ ಹಣವೂ ಜಾಸ್ತಿಯಾಗಿದೆ. ನಿಮಗೆ ಬರುತ್ತಿರತಕ್ಕಂಥ ವಿದೇಶಿ ಹಣವೂ ಜಾಸ್ತಿಯಾಗಿದೆ. ಆ ಪ್ರಮಾಣಕ್ಕೆ ತಕ್ಕಹಾಗೆ ಭ್ರಷ್ಟಾಚಾರದ ಪ್ರಮಾಣವೂ ಕೂಡ ಜಾಸ್ತಿಯಾಗಬೇಕು. ಆ ಕಾರಣ ಚರ್ಚೆಗೆ ಆ ಪ್ರಮಾಣದಲ್ಲೇ ಕಾಲಾವಕಾಶ ಜಾಸ್ತಿಯಾಗಬೇಕು. ನೂರು ದಿವಸ ಸಭೆ ನಡೆಸಬೇಕೆಂದು ಕೆಲವು ಸದಸ್ಯರುಗಳು ಹೇಳುತ್ತಿದ್ದಾರೆ. ನೂರು ದಿವಸವೂ ಸಾಲುವುದಿಲ್ಲ. ಕನಿಷ್ಟ ನೂರು ದಿವಸ ಎಂದು ಹೇಳಬಹುದೇ ಹೊರತು 70ರ ದಶಕಕ್ಕೂ 90ರ ದಶಕಕ್ಕೂ ಕಾರ್ಯಚಟುವಟಿಕೆ ಎಷ್ಟು ಜಾಸ್ತಿಯಾಗಿದೆ, ಆ ಪ್ರಮಾಣಕ್ಕೆ ತಕ್ಕಹಾಗೆ ಚಟುವಟಿಕೆಯ ಕಾಲಾವಧಿ ಕೂಡ ಹೆಚ್ಚಾಗಬೇಕು ಎಂದು ಆಗ್ರಹಪಡಿಸುತ್ತಿದ್ದೇನೆ. ಇದು ತಮ್ಮ ಜವಾಬ್ದಾರಿ, ತಾವೇ ತೀರ್ಮಾನ ಮಾಡಬೇಕು. ಇದು ಸಭಾನಾಯಕರನ್ನು ಕೇಳಿ ತೀರ್ಮಾನ ಮಾಡತಕ್ಕಂಥ ವಿಚಾರವಲ್ಲ. ಏಕೆಂದರೆ ಈ ಸದನದ ಗೌರವವನ್ನು ಕಾಪಾಡತಕ್ಕಂಥ ಪೂರ್ಣ ಜವಾಬ್ದಾರಿ ತಮ್ಮ ಮೇಲೆ ಇರುವುದರಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ.

Sri. Qumarul Islaam : Sir, I have given an adjournment motion.

ಅಧ್ಯಕ್ಷರು : ಅದನ್ನು ನಾನು ನೋಡುತ್ತಿದ್ದೇನೆ, ನಿಮ್ಮ ನಿಲುವಳಿ ಸೂಚನೆ ಬಗ್ಗೆ ನಾನು ನೋಡುತ್ತಿದ್ದೇನೆ.

Sri. Qumarul Islaam : Sir, it is a very serious matter and for every three days we are getting water. That is not sufficient. Bhosga Tank has dried up, in genniter a river there is no water. Bheema Scheme has not been completed.

ಶ್ರೀ ಬಿ.ಎಸ್. ಯಡಿಯೂರಪ್ಪ : ಗುಲ್ಬರ್ಗಾದಲ್ಲಿ ಕುಡಿಯುವ ನೀರು ಇಲ್ಲ. ಶಿವಮೊಗ್ಗದಲ್ಲಿ ಬಿತ್ತನೆಗೆ ತೊಂದರೆಯಾಗಿದೆ. ಇವೆಲ್ಲಾ ವಿಷಯಗಳು ಚರ್ಚೆಯಾಗುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ.

Sri. Qumarul Islaam : I want that the adjournment motion has to be taken up.

Mr. Speaker : I have realised the seriousness of the situation for which you have drawn my attention. I will look into this.

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಈ ಸದನ ಇನ್ನು ಒಂದು ವಾರವೋ ಅಥವಾ ನಾಲ್ಕು ದಿವಸವೋ ನಡೆಯಬೇಕು ಎನ್ನತಕ್ಕಂಥದ್ದನ್ನು ಈಗಾಗಲೇ ನನ್ನ ಕೆಲವು ಸ್ನೇಹಿತರುಗಳು ಹೇಳಿದ್ದಾರೆ. ನನಗೆ ಒಂದು ವಿಷಯ ತಿಳಿಯುತ್ತಿಲ್ಲ. ಮಾನ್ಯ ಸಭಾನಾಯಕರು ಏತಕ್ಕೆ ಈ ರೀತಿ ಹಿಂದೇಟು ಹಾಕುತ್ತಿದ್ದಾರೆ? ಏನು ನಿಮ್ಮ ಪ್ರಾಬ್ಲಮ್? ನಾವುಗಳು ಪ್ರತಿನಿಧಿಯಾಗಿ ಬಂದಿದ್ದು ಜನರ ಸಮಸ್ಯೆ, ನಾಡಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ. ರಾಜ್ಯದಲ್ಲಿ ಬಹಳಷ್ಟು ಕಡೆ ಕುಡಿಯುವುದಕ್ಕೆ ನೀರಿಲ್ಲ. ಬಹಳಷ್ಟು ರೈತರುಗಳು ಕಂಗಾಲಾಗಿದ್ದಾರೆ. ಮಳೆಯಾಗಿಲ್ಲ, ಕೃಷಿ ಇಲಾಖೆಯಿಂದ ಏನು ಸರಿಯಾದ ಸಮಯದಲ್ಲಿ ಬೀಜ, ಗೊಬ್ಬರ ಹೋಗಬೇಕೋ ಅದು ಹೋಗಿಲ್ಲ. ರೇಷ್ಮೆ ಬೆಳೆಗಾರರ ಸಮಸ್ಯೆ ಇದೆ. ಮೊನ್ನೆ ಟ್ರಾನ್ಸ್‌ಪೋರ್ಟ್ ಆಪರೇಟರ್ಸ್ ಅವರು ಸ್ಟ್ರೈಕನ್ನು ಮಾಡಿದ್ದಾರೆ. ಅದರಿಂದ ಕೆಲವು ಸಮಸ್ಯೆಗಳು ನಿರ್ಮಾಣವಾಗಿದೆ. ಎಂಟ್ರಿ ಟ್ಯಾಕ್ಸ್ ಬಗ್ಗೆ ಸಮಸ್ಯೆ ನಿರ್ಮಾಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಎಲ್ಲಾ ವಿಷಯಗಳ ಬಗ್ಗೆ ದೊಡ್ಡ ಶಕ್ತಿಯಿಂದ ಚರ್ಚೆ ಮಾಡದೇ ಹಿಂದಕ್ಕೆ ಏತಕ್ಕೆ ಹೋಗಬೇಕು ? ಆದ್ದರಿಂದ ನಾನು ತಮ್ಮ ಮುಖಾಂತರ ಮಾನ್ಯ ಸಭಾ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಇನ್ನೊಂದುವಾರ ಈ ಸಭೆಯನ್ನು ನಡೆಸಿ, ಹಲವಾರು ವಿಷಯಗಳ ಮೇಲೆ ಇಲ್ಲಿ ಚರ್ಚೆ ನಡೆಯಬೇಕಾಗಿದೆ. ಆದ್ದರಿಂದ ನಿಮಗೂ ಒಳ್ಳೆಯದಾಗುತ್ತದೆ. ಏಕೆಂದರೆ ನಮ್ಮ ಸರ್ಕಾರ ಇದ್ದಾಗಲೂ ನಮ್ಮ ಕಾಲದಲ್ಲಿಯೂ ಲೋಪದೋಷಗಳು ಇದ್ದವು. ಅದರ ಅರ್ಥ ನೀವೆಲ್ಲಾ ಸರಿ ಮಾಡಿದ್ದೀರಿ, ಲೋಪದೋಷಗಳಿದ್ದರೆ ಆ ಲೋಪದೋಷಗಳನ್ನು ತೋರಿಸಿದರೆ ನೀವು ಅದನ್ನು ಸುಧಾರಿಸಲಿಕ್ಕೆ ಸಾಧ್ಯ ಆಗುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯ ಆಗುತ್ತದೆ. ನಿಮ್ಮಷ್ಟಿಗೆ ನೀವೇ ಆಡಳಿತ ಮಾಡುತ್ತಾ ಹೋದರೆ ಏನು ನಡೆಯುತ್ತದೆಂದು ನಿಮಗೆ ಯಾರು ಹೇಳುವುದು ? ಆ ಅಧಿಕಾರ ನಮಗೆ ಇದೆ. ಆ ಜನರಿಗೆ ಇಲ್ಲ, ಅವರು ನೀವು ಮಾಡಿದ್ದೇ ಸರಿ ಎಂದು ಹೇಳುತ್ತಾರೆ. ಅದರಲ್ಲಿ ಏನು ತಪ್ಪಿದೆ, ಏನು ಸರಿಯಿಲ್ಲ, ಒಳ್ಳೆಯ ಕೆಲಸವನ್ನು ಮಾಡಿದರೆ ನಾವು ಮೆಚ್ಚಬೇಕಾಗುತ್ತದೆ. ಕೆಟ್ಟ ಕೆಲಸವನ್ನು ಮಾಡಿದಾಗ ನಾವು ಟೀಕೆ ಟಿಪ್ಪಣಿಗಳನ್ನು ಮಾಡಬೇಕಾಗುತ್ತದೆ. ಆ ಅವಕಾಶವನ್ನು ತಾವು ಮಾಡಿಕೊಟ್ಟರೆ ಅನುಕೂಲವಾಗಗುತ್ತದೆ. ತಾವು ಆ ಅವಕಾಶವನ್ನು ಕೊಟ್ಟರೆ ಸರ್ಕಾರಕ್ಕೆ ಒಳ್ಳೆಯದು. ಸರ್ಕಾರದ ದೃಷ್ಟಿಯಿಂದ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಮಾನ್ಯ ಬೈರೇಗೌಡರು ಒಂದು ಮಾತನ್ನು ಹೇಳಿದರು. ಏನೆಂದರೆ ನಾವು ಟಿ.ಎ./ಡಿ.ಎ. ಸಲುವಾಗಿ ಇಲ್ಲಿ ಸಭೆ ಸೇರಿದ್ದೇವೆಂದು. ಅವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅವರು ಹಾಗೆ ಹೇಳಿದ್ದು ನಾಳೆ ಪ್ರೆಸ್ಸಿಗೆ ಹೋಗಬಾರದು. ಇಲ್ಲಿ ಬೇರೆ ಬೇರೆ ಬಿಲ್‌ಗಳು ಇವೆ. ಅವುಗಳ ಬಗ್ಗೆ ಕೂಡ ಇಲ್ಲಿ ಚರ್ಚೆ ನಡೆಯುತ್ತದೆ. ಹಾಗಾಗಿ ಪತ್ರಿಕೆಯಲ್ಲಿ ನಾಳೆ ನಾವು ಇಲ್ಲಿ ಬರೀ ಟಿ.ಎ./ಡಿ.ಎ. ಸಲುವಾಗಿ ಸೇರಿದ್ದೇವೆನ್ನುವ ಅಭಿಪ್ರಾಯಕ್ಕೆ ಬರಬಾರದೆಂದು ನಾನು ಹೇಳುತ್ತಿದ್ದೇನೆ. ಅಜೆಂಡಾದಲ್ಲಿ ಕೆಲವು ವಿಷಯಗಳ ಇವೆ. ಹಾಗಾಗಿ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಇದರಲ್ಲಿ ದೊಡ್ಡ ಮನಸ್ಸು ಮಾಡಬೇಕು. ವಿರೋಧ ಪಕ್ಷದವರು ಅಲ್ಲ, ಎಲ್ಲಾ ಪಕ್ಷದವರು ಕೂಡಿ ಹೇಳುತ್ತಿದ್ದೇವೆ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಎಲ್ಲರೂ ಕೂಡಿ ಹೇಳುತ್ತಿದ್ದೇವೆ. ಎಲ್ಲರೂ ಒತ್ತಾಯಮಾಡಿ ಒಂದುವಾರ ಅಥವಾ ನಾಲ್ಕು ದಿವಸ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು 15 ದಿವಸ ಸಭೆಯನ್ನು ನಡೆಸಬೇಕೆಂದು ಕೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮೊದಲು ಒಂದು ವಾರಕ್ಕೆ ಒಪ್ಪಿಕೊಳ್ಳಲಿ, ನಂತರ 15 ದಿವಸ ಮಾಡಲಿ, ಇದರ ಬಗ್ಗೆ ಚರ್ಚೆ ಮಾಡಲು ಮತ್ತೊಮ್ಮೆ ಅವಕಾಶ ಮಾಡಿಕೊಡಬೇಕೆಂದು ಅವರಲ್ಲಿ ನಾನು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜ್‌ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಅಧ್ಯಕ್ಷರೆ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಸರಿಯಾದ ರೀತಿಯಲ್ಲಿ ಬಿತ್ತನೆ ಆಗುತ್ತಿಲ್ಲ. ರೈತರು ಬಹಳ ತೊಂದರೆಯಲ್ಲಿದ್ದಾರೆ. ಇದರ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರವಾಗಿ ಕಾವೇರಿ ಸಮಸ್ಯೆ ಇರಬಹುದು, ಮತ್ತು ಬೇರೆ ಬೇರೆ ಇನ್ನಿತರ ನಮ್ಮ ರಾಜ್ಯದ ಜ್ವಲಂತ ಸಮಸ್ಯೆ ಇರಬಹುದು, ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡುವಂತಹ ಪ್ರಸಂಗ ಇವತ್ತು ಒದಗಿದೆ. ನಮ್ಮ ರಾಜ್ಯದ ರೈತರಾಗಲಿ, ಜನಸಾಮಾನ್ಯರಾಗಲಿ, ಬಹಳ ಕಷ್ಟದಲ್ಲಿದ್ದಾರೆ. ಮೊನ್ನೆ ನಡೆದಂತಹ ವರ್ಗಾವಣೆಯಲ್ಲಿಯೂ ಬಹಳ ಭ್ರಷ್ಟಾಚಾರವಾಗಿದೆ ಎಂದು ಪತ್ರಿಕೆಯಲ್ಲಿಯೂ ಬಂದಿದೆ. ಇಂತಹ ಹಲವಾರು ಸಮಸ್ಯೆಗಳ ಚರ್ಚೆ ಮಾಡಬೇಕಾಗಿದೆ. ಕುಡಿಯುವ ನೀರಿನ ಸಮಸ್ಯೆ ಇರಬಹುದು, ರೈತರ ಸಮಸ್ಯೆ ಇರಬಹುದು. ಜನಸಾಮಾನ್ಯರ ಸಮಸ್ಯೆ ಇರಬಹುದು, ಕಾಲುವೆ ಕಟ್ಟಡಗಳು ಕುಸಿದು ಬೀಳುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಕಾಣುತ್ತಿವೆ. ಕೇವಲ ಕರ್ನಾಟಕ ರಾಜ್ಯದಲ್ಲಿ ಬೀದರ್ ಜಿಲ್ಲೆಯಲ್ಲಿ ಒಂದೇ ಒಂದು ಜಿಲ್ಲಾಪರಿಷತ್ತು ಇದ್ದರೂ ಕೂಡ ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಕೊಡುತ್ತಿಲ್ಲ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ ಸಾಕಷ್ಟು ಹಣದ ವ್ಯವಸ್ಥೆ ಆಗುತ್ತಿಲ್ಲ. ಅದಕ್ಕೆ ಇದುವರೆಗೂ ಚೇರ್ಮನ್ ಅನ್ನು ನೇಮಕ ಮಾಡಿಲ್ಲ. ಇಂತಹ ಹಲವಾರು ಸಮಸ್ಯೆಗಳ ಬಗ್ಗೆ ನಾವು ಇಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಮತ್ತು ಮಾನ್ಯ ಸದಸ್ಯರು ಹೇಳಿದ ಪ್ರಕಾರವಾಗಿ ಇನ್ನು ವಿಧಾನ ಸಭೆಯ ಕಾರ್ಯಕಲಾಪಗಳನ್ನು 15 ದಿವಸಗಳ ಕಾಲ ತಾವು ಮುಂದುವರಿಸಬೇಕೆಂದು ನಾನು ತಮ್ಮ ಪರವಾಗಿ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಲು ಬಯಸುತ್ತೇನೆ.

ಡಾ. ಜೀವರಾಜ್ ಆಳ್ವ : ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ತಮ್ಮನ್ನು ಭೇಟಿಯಾಗಿ ನಮ್ಮ ಕೆಲವು ವೇದನೆಗಳನ್ನು ಇಲ್ಲಿ ಹೇಳಲಿಕ್ಕೆ ತಾವು ಮನಸ್ಸು ಮಾಡಿ 10 ನಿಮಿಷ ಸಮಯ ಕೊಡಬೇಕೆಂದು ಕೇಳಿದ್ದೆ.

ಅಧ್ಯಕ್ಷರು : ಬನ್ನಿ ಈಗ ಸಭೆಯನ್ನು ಅಡ್ಜರ್ನ್ ಮಾಡುತ್ತೇನೆ. ಒಳಗೆ ಹೋಗೋಣ ಬನ್ನಿ ಮಾತನಾಡೋಣ.

ಡಾ. ಜೀವರಾಜ್ ಆಳ್ವ : ಇಲ್ಲೇ ಮಾತನಾಡೋಣ. Sir, you are the custodion of physical and mental well being of a member and with all responsibility, I am here for the last four consecutive terms. Every time I have risen to speak, I have waited patiently to be listened and to catch your eye.

Mr.. Speaker : You have caught my eye now.

Dr. Jeevaraj Alva : Yes sir, please let me make my submission if you permit me.

Mr. Speaker : About what ?

Dr. Jeevaraj Alva : Let me submit.

Mr. Speaker : Are you lending your voice of support to the position taken. It is something..........

Dr. Jeevaraj Alva : Very personal, very continuance of my... I am in a Terrible ambiguity...

(Interruptions)

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ವಿಷಯಕ್ಕೆ ಬರಬೇಕು. ವಿಷಯಾಂತರ ಬೇಡಿ. ವಿಷಯಕ್ಕೆ ಬನ್ನಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವಿಷಯದ ಬಗ್ಗೆ ಮಾತನಾಡಿ. ಸಭೆಯನ್ನು ಮುಂದುವರೆಸುವ ಬಗ್ಗೆ ನಮ್ಮ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಈಗ ಇರತಕ್ಕ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಮಾತನಾಡಿ.

ಡಾ. ಜೀವರಾಜ ಆಳ್ವ : ಈ ವಿಚಾರವನ್ನು ಪ್ರತಿಪಾದನೇ ಮಾಡೇ......

ಶ್ರೀ ವಾಟಾಳ್ ನಾಗರಾಜ್ : 15 ದಿವಸಗಳ ಕಾಲ ಸಭೆಯನ್ನು ನಡೆಸಬೇಕೆನ್ನುವುದರ ಬಗ್ಗೆ ಆಳ್ವರವರು ಮಾತನಾಡಲಿ ನಮ್ಮದು ಏನೂ ಅಭ್ಯಂತರವಿಲ್ಲ. ನಾವು ಯಾವುದು ಮಾತನಾಡಬೇಕು ಬಿಡಬೇಕು ಎಂದು ಹೇಳಲಿಕ್ಕೆ ನಾವು ತಯಾರಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಬೇರೆ ವಿಚಾರ ಮಾತನಾಡುತ್ತಾರೆಂದು ನಿಮಗೆ ಹೇಗೆ ಗೊತ್ತು?

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ತರಬೇಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಬೇರೆ ವಿಚಾರ ಮಾತನಾಡುತ್ತಾರೆಂದು ನಿಮಗೆ ಹೇಗೆ ಗೊತ್ತು?

ಡಾ. ಜೀವರಾಜ ಆಳ್ವ : ಒಂದು ಪಕ್ಷದ ವಿಚಾರ, ಲೀಡರ್ ವಿಚಾರ ....

ಶ್ರೀ ಸಿ. ಬೈರೇಗೌಡ : 15 ದಿವಸಗಳ ಕಾಲ ಸಭೆಯನ್ನು ಮುಂದುವರಿಸಬೇಕೆನ್ನುವ ವಿಷಯದ ಬಗ್ಗೆ ಚರ್ಚೆಯಲ್ಲಿ ನಾವೀಗ ಭಾಗವಹಿಸಿದ್ದೇವೆ. ಅದಕ್ಕೆ ಪೂರಕವಾದ ರೀತಿಯಲ್ಲಿ ಹೇಳುವುದಾದರೆ ಅದಕ್ಕೆ ಸ್ವಾಗತ ಮಾಡುತ್ತೇವೆ. ಇದನ್ನು ಬಿಟ್ಟು ವಿಷಯಾಂತರ ಮಾಡತಕ್ಕದ್ದಕ್ಕೆ ತಾವು ಅವಕಾಶವನ್ನು

ಕೊಡಕೂಡದೆಂದು ತಮ್ಮಲ್ಲಿ ವಿನಂತಿಸುತ್ತೇನೆ. ಮಾನ್ಯ ಆಳ್ವರವರು ಹಿರಿಯ ಸದಸ್ಯರಲ್ಲಿ ಒಬ್ಬರಾಗಿದ್ದಾರೆ. ಅವರು ವಿಷಯಾಂತರ ಮಾಡಬಾರದು. ಯಾವ ವಿಚಾರವನ್ನು ಎಲ್ಲಿ ಪ್ರಸ್ತಾಪ ಮಾಡಬೇಕೋ ಅಲ್ಲಿ ಪ್ರಸ್ತಾಪ ಮಾಡತಕ್ಕದ್ದು ಉಚಿತ. ಆದುದರಿಂದ ಅವರ ಅನುಭವಕ್ಕೆ ತಕ್ಕಂತೆ ಅವರು ಈಗ ಹೇಳಿಕೊಳ್ಳುತ್ತಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತೆ ತಮಗೂ ಕೂಡ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಪಕ್ಷಗಳ ಮಾನ್ಯ ನಾಯಕರುಗಳು ಹಾಗೂ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕ ಅಭಿಪ್ರಾಯವನ್ನು ನಾವೆಲ್ಲಾ ಕೇಳಿದ್ದೇವೆ. ಈ ಸಭೆಯ ಕಾರ್ಯಕಲಾಪವನ್ನು ಬಹಳ ದಿನಗಳವರೆಗೆ ನಡೆಸಬೇಕು, ಹಲವಾರು ಪ್ರಾಮುಖ್ಯವಾದ ವಿಷಯಗಳು ಚರ್ಚೆಗೆ ಒಳಪಡಬೇಕು ಎನ್ನತಕ್ಕದ್ದು ಅವರೆಲ್ಲರ ಮಾತಿನ ಒಟ್ಟಾರೆ ಅಭಿಪ್ರಾಯವಾಗಿದೆ. ಯಾವುದೇ ವಿಷಯದ ಬಗ್ಗೆ ಚರ್ಚೆಯಾಗಬಾರದು, ಅದಕ್ಕೆ ಉತ್ತರವನ್ನು ಕೊಡುವುದರಲ್ಲಿ ತಪ್ಪಿಸಿಕೊಳ್ಳಬೇಕು ಎನ್ನತಕ್ಕ ಅಭಿಪ್ರಾಯ ಸರ್ಕಾರದ್ದಲ್ಲ. ಈ ಮಾತನ್ನು ಮೂಲನೀತಿಯನ್ನಾಗಿ ತಮ್ಮ ಮುಂದಿಡುತ್ತಿದ್ದೇನೆ. ಒಂದು ವರ್ಷದಲ್ಲಿ ಸದನವು ಎಷ್ಟು ದಿನಗಳಕಾಲ ನಡೆಯಬೇಕು ಎನ್ನತಕ್ಕಂಥದನ್ನು ನಾವು ನೀವು ಅಲ್ಲಿ ಮತ್ತು ಇಲ್ಲಿ ಚರ್ಚೆ ಮಾಡಿದ್ದೇವೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಎಷ್ಟು ದಿವಸ ನಡೆಸುತ್ತಿದೆ ಎನ್ನುವ ವಿಚಾರದ ಬಗ್ಗೆ ಇಲ್ಲಿ ಅಥವಾ ಅಲ್ಲಿ ನಾವು ಚರ್ಚೆಗೆ ಹೇಳಿತಾಗಲೂ ಕೂಡ ಎಷ್ಟೋಸಾರಿ ಪ್ರಸ್ತಾಪ ಮಾಡಿದ್ದೇವೆ. ಬಜೆಟ್‌ನ ಅಧಿವೇಶನವಿರಬಹುದು ಅಥವಾ ಬಜೆಟ್‌ನ ಅಧಿವೇಶನವಲ್ಲದೇ ಇರಬಹುದು; ನಾವು ಯಾವ ರೀತಿಯಾಗಿ ಅಧಿವೇಶನವನ್ನು ನಡೆಸುತ್ತೇವೆ ಎನ್ನತಕ್ಕದ್ದು ಇಂದಿನ ನಮ್ಮ ಅನುಭವದ ಮಾತಲ್ಲ, ಅನೇಕ ವರ್ಷಗಳಿಂದಲೂ ಕೂಡ ನಡೆದುಕೊಂಡು ಬಂದಿರತಕ್ಕದ್ದು. ಇವತ್ತು ಚರ್ಚೆಗೆ ವಿಷಯವು ಬರತಕ್ಕಂಥ ಸಂದರ್ಭದಲ್ಲಿ; ಅದು ಆಯವ್ಯಯದ ಅಧಿವೇಶನವಿರಬಹುದು ಅಥವಾ ಆಯವ್ಯಯದ ಅಧಿವೇಶನವಲ್ಲದೇ ಇರಬಹುದು, ಅದನ್ನು ಸದುಪಯೋಗ ಮಾಡಿಕೊಳ್ಳತಕ್ಕ ಸಂದರ್ಭ ಬಂದಾಗ ಅದನ್ನು ಮಾಡಿಕೊಳ್ಳತಕ್ಕ ಪ್ರಯತ್ನ ಕೂಡ ಅಲ್ಲಿ ಇರಬೇಕು. ಆಗ ಅದರಲ್ಲಿ ಔಚಿತ್ಯ ಅಡಗಿರುತ್ತದೆ. ನಾನು ಅದರ ವಿವರಣೆಗೆ ಹೋಗುವುದಿಲ್ಲ. ಅದು ಸದುಪಯೋಗವಾಗಿದ್ದರೆ ಈ ಸದನಕ್ಕೆ ಒಳಿತಾಗಿತ್ತು ಎಂದು ನನ್ನ ಭಾವನೆ. ನಾನು ಅದರ ವಿವರಣೆಗೆ ಹೋಗುವುದಿಲ್ಲ. ಅದರ ಅರ್ಥವೇನೆಂದರೆ ಸರ್ಕಾರದ ವತಿಯಿಂದ ವಿಷಯಗಳು ಚರ್ಚೆಯಾಗಬಾರದು ಎನ್ನತಕ್ಕ ಅಭಿಪ್ರಾಯವನ್ನಿಟ್ಟುಕೊಂಡು ಬಜೆಟ್ ಅಧಿವೇಶನವನ್ನು ಕರೆಯಲಿಲ್ಲ. ಚರ್ಚೆಯಾಗಲಿ ಎನ್ನತಕ್ಕ ದೃಷ್ಟಿಯಿಂದಲೇ ನಾವೆಲ್ಲ ಅಧಿವೇಶನವನ್ನು ಕರೆದಿದ್ದೆವು. ಆದರೆ ಆ ಕಾಲದಲ್ಲಿ ತಮ್ಮ ಅಭಿಪ್ರಾಯ ಬೇರೆಯೇ ಆಗಿತ್ತು. ಅಧಿವೇಶನವನ್ನು ಉಪಯೋಗ ಮಾಡಿಕೊಳ್ಳತಕ್ಕದ್ದು ಆಗಿರಲಿಲ್ಲ. ವಿವರಣೆಗಳಿಗೆ ನಾನು ಹೋಗುವುದಿಲ್ಲ. ಕೆಲವೊಮ್ಮೆ ಇಲಾಖಾ ಬೇಡಿಕೆಗಳು ಬಂದಂಥ ಕಾಲದಲ್ಲಿ ಚರ್ಚೆಯು ನಡೆಯಲಿ ಎನ್ನತಕ್ಕ ಅಭಿಪ್ರಾಯವನ್ನು ನಾನು ಎಷ್ಟೋ ಸಾರಿ ಹೇಳಿದ್ದೇನೆ. ಸಭಾನಾಯಕನಾಗಿ ಆರೀತಿ ಹೇಳಿದ್ದೇನೆ. ಈಗಲೂ ಕೂಡ ಆ ನನ್ನ ಅಭಿಪ್ರಾಯದ ಮಾತಿದೆ ವಿರೋಧವಾಗಿರತಕ್ಕ ಮತ್ತೊಂದು ಅಭಿಪ್ರಾಯವನ್ನು ಹೊಂದಿರುವುದಿಲ್ಲ. ಒಂದು ಮಾತನ್ನು, ಹೇಳಿದರೆ ಅದಕ್ಕೆ ನಾನು ಅಂಟಿಕೊಂಡಿರಬೇಕಾಗುತ್ತದೆ. ಹಲವಾರು ವಿಷಯಗಳನ್ನು ಒಳಗೊಂಡಿರತಕ್ಕ ಅಧಿವೇಶನದಲ್ಲಿ ಚರ್ಚೆಗೆ ಮುಕ್ತವಾದ ಅವಕಾಶ ಇರತಕ್ಕ ಅಧಿವೇಶನವಾಗಿರಬೇಕು. ಆದರೆ ಅದಕ್ಕೆ ಕಾಲವನ್ನು ನೋಡಿ ನಿಗದಿ ಮಾಡತಕ್ಕಂಥದ್ದರ ಬಗ್ಗೆ ವಿಚಾರ ಮಾಡಿದ್ದೇವೆ, ನಂತರ ಅಧಿವೇಶನವನ್ನು ಕರೆಯೋಣ, ಎನ್ನತಕ್ಕ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಮಧ್ಯೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ರಾಷ್ಟ್ರಪತಿಗಳ ಸ್ಥಾನಕ್ಕೆ ಚುನಾವಣೆಯು ನಡೆಯತಕ್ಕ ವಿಚಾರ ಬಂತು. ಅದಕ್ಕೆ ಸಂಬಂಧಪಟ್ಟ ಹಾಗೆ ಇದೇ ಕಾಲದಲ್ಲಿ ಏಕೆ ಅಧಿವೇಶನವನ್ನು ಇಟ್ಟುಕೊಳ್ಳಬಾರದು ಎನ್ನತಕ್ಕ ಅಭಿಪ್ರಾಯ ಕೂಡ ಬಂತು. ಆದಕ್ಕಾಗಿಯೇ ಈ ಅಧಿವೇಶನವನ್ನು ಕರೆದದ್ದು ಎನ್ನುವುದಲ್ಲ, ಅಧಿವೇಶನವನ್ನು ನಾವು ಕರೆಯುವುದು ವಿಷಯಗಳ ಚರ್ಚೆಗಾಗಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ರಾಷ್ಟ್ರಪತಿಗಳ ಸ್ಥಾನಕ್ಕೆ

ಚುನಾವಣೆಯಂಥ ಸಂದರ್ಭ ಬಂದಾಗ ಸದಸ್ಯರುಗಳ ಹಾಜರಾತಿಗೋಸ್ಕರ ಕೆಲವೊಮ್ಮೆ ನೀವೂ ಕೂಡ ಈ ರೀತಿ ಉಪಯೋಗ ಮಾಡಿಕೊಂಡಿದ್ದೀರಿ, ನಾವು ಕೂಡ ಉಪಯೋಗ ಮಾಡಿಕೊಂಡಿದ್ದೇವೆ. ಚುನಾವಣೆಗಳು ಬಂದಬಂದಾಗಲೆಲ್ಲಾ ನಾವು ಆ ರೀತಿ ಉಪಯೋಗ ಮಾಡಿಕೊಂಡು ಬಂದಿದ್ದೇವೆ. ಅದು ಬಿಟ್ಟರೆ, ಅದಕ್ಕೋಸ್ಕರ ಈ ಅಧಿವೇಶನ ಎನ್ನತಕ್ಕಂಥ ಮಾತಲ್ಲ. ವಿಷಯಗಳ ಚರ್ಚೆಗಾಗಿ ಪ್ರತ್ಯೇಕವಾದ ಅಧಿವೇಶನವನ್ನು ಕರೆಯತಕ್ಕಂಥ ಸಂದರ್ಭಗಳು ಕೂಡ ಬರುತ್ತದೆ. ಆ ಮಾತನ್ನು ನಾನು ಒಪ್ಪುತ್ತೇನೆ. ಅಂದರೆ, ಮುಂದಿನ ಬಜೆಟ್ ಅಧಿವೇಶನ ಬರತಕ್ಕಂಥಾದ್ದು ಜಂಟಿ ಅಧಿವೇಶನದ ನಂತರದ ಪ್ರಶ್ನೆ. ಅದರ ಬಗ್ಗೆ ಈಗಲೇ ನಾನು ವಿವರಗಳಿಗೆ ಹೋಗುವುದಿಲ್ಲ. ಈ ವರ್ಷದಲ್ಲಿ ಮತ್ತೆ ಅಧಿವೇಶನ ಕರೆಯಬೇಕಾಗುತ್ತದೆ. ಆ ಮಾತನ್ನು ಇಲ್ಲವೆಂದು ನಾನು ಹೇಳುತ್ತಿಲ್ಲ. ಬರಗಾಲದ ವಿಚಾರ ಬರಬಹುದು, ಈಗ ಬರಗಾಲ ಪ್ರಾರಂಭವಾಗತಕ್ಕಂಥ ಲಕ್ಷಣಗಳಿವೆ. ಅದರೆ, ನನಗೆ ಗೊತ್ತಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ, ಮತ್ತು ಅಲ್ಲಿ ಬರಗಾಲದ ವಿಚಾರ. ಬಿತ್ತನೆ, ರಾಯಚೂರಿನ ಕೆಲವು ಭಾಗಗಳಲ್ಲಿ ಆಗಿದೆ, ಕೆಲವು ಭಾಗಗಳಲ್ಲಿ ಆಗಿಲ್ಲ ಎನ್ನತಕ್ಕಂಥಾದ್ದು, ಬೀದರ್ ಜಿಲ್ಲೆಯಲ್ಲಿ ಬಿತ್ತನೆ ಕೆಲವು ಭಾಗಗಳಲ್ಲಿ ಆಗಿದೆ ಕೆಲವು ಭಾಗಗಳಲ್ಲಿ ಆಗಿಲ್ಲ ಎನ್ನತಕ್ಕಂಥಾದ್ದು. ತಮ್ಮ ಮಾತು ಎಷ್ಟರಮಟ್ಟಿಗೆ ಉತ್ಪ್ರೇಕ್ಷೆಯಿಂದ ಒಳಗೊಂಡಿರಬಹುದು ಎಂಬ ಮಾತನ್ನು ನಾನು ಆಡಲಾರೆ. ಅದರಲ್ಲಿ ಸತ್ಯಾಂಶ ಕೂಡ ಇದೆ. ಆ ಮಾತನ್ನು ನಾನು ಮುಕ್ತವಾಗಿ ಒಪ್ಪಿಕೊಳ್ಳಲೇಬೇಕು. ಮತ್ತು ಇದೇ ಪರಿಸ್ಥಿತಿ ಶಿವಮೊಗ್ಗದಲ್ಲೂ ಕೂಡ ಇದೆ ಎನ್ನತಕ್ಕಂಥಾದ್ದು ಅಂದರೆ, ಮಳೆ ಬರದಿದ್ದರೆ ಅಲ್ಲಿಯೂ ಕೂಡ ಅನ್ಯಾಯವಾಗುತ್ತದೆ ಎನ್ನತಕ್ಕಂಥದ್ದು ಶ್ರೀಮಾನ್ ಯಡಿಯೂರಪ್ಪನವರ ಅಭಿಪ್ರಾಯ ಕೂಡ ಹೌದು. ಈಗ ಇನ್ನೂ ಪ್ರಾರಂಭವಾಗಿದೆ. ಹೈದರಾಬಾದ್—ಕರ್ನಾಟಕ ಪ್ರದೇಶದ ಕೆಲವು ಭಾಗಗಳನ್ನು ಬಿಟ್ಟರೆ ಉಳಿದಿರತಕ್ಕಂಥ ಭಾಗಗಲ್ಲಿ ನಾವು ಇನ್ನೂ ಕೂಡ ಕಾದು ನೋಡತಕ್ಕಂಥ ಸಂದರ್ಭಗಳಿವೆ. ಏಕೆಂದರೆ, ಇಲ್ಲಿಯವರೆಗೆ ಒಳ್ಳೆಯ ಮಳೆ ಕರ್ನಾಟಕ ರಾಜ್ಯದಲ್ಲಿ, ಬೇರೆ ಕಡೆ ನಾನು ಹೇಳುವ ಹಾಗಿದ್ದರೆ ಬಿತ್ತನೆ ಹೆಚ್ಚಿನ ಪ್ರಮಾಣದಲ್ಲಿ ಕೆಲವು ಕಡೆ ಆಗಿದೆ, ಕೆಲವು ಕಡೆ ಆಗಿಲ್ಲವೆನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಡೀ ರಾಜ್ಯದಲ್ಲಿ ಬಿತ್ತನೆಯಾಗಿದೆ ಎನ್ನತಕ್ಕಂಥ ಅಭಿಪ್ರಾಯಕ್ಕೆ ತಾವೂ ಕೂಡ ಹೇಳಲಾರಿರಿ ಎಂದು ಭಾವಿಸುತ್ತೇನೆ. ಅದು ವಾಸ್ತವಾಂಶದ ವಿಚಾರ ಕೂಡ ಆಗಲಾರದು. ಇದರ ಬಗ್ಗೆ ಇನ್ನೂ ಕೆಲವು ದಿವಸಗಳನ್ನು ಬಿಟ್ಟು ಚರ್ಚೆಗೆ ಕುಳಿತರೆ ಅದರ ವಾಸ್ತವಾಂಶ ಅಥವಾ ಅದರ ಗಂಭೀರತೆ, ವಿಸ್ತಾರದ ದೃಷ್ಟಿಯಿಂದ ಮಾತನಾಡುವುದು ತಮಗೂ ಕೂಡ ಒಳ್ಳೆಯದು ಎನ್ನತಕ್ಕಂಥ ಒಂದು ವಿಚಾರ. ಇದು ನನ್ನ ಅಭಿಪ್ರಾಯ. ತಾವು ಕೂಡ ವಿಚಾರ ಮಾಡಿ. ಅದರ ಬಗ್ಗೆ ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಚರ್ಚೆ ಮಾಡುವುದಕ್ಕೆ ಕಾಲದ ದೃಷ್ಟಿಯಿಂದ ಸ್ವಲ್ಪ ತಡವಾದರೆ ಅದರ ಪ್ರಖರತೆ ಏನಿದೆ, ಅದರ ಆಳ ಏನಿದೆ ಮತ್ತು ಅದರ ವಿಸ್ತಾರ ಏನಿದೆ, ಅದು ನಿಮಗೆ ಇನ್ನೂ ಹೆಚ್ಚಿನ ಇಂಬು ಕೊಡಬಹುದು ಎನ್ನತಕ್ಕಂಥಾದ್ದು. ಅದನ್ನು ಕೇಳಿದ ನಂತರ ನಾವು ಏನು ಕಾರ್ಯಕ್ರಮವನ್ನು ಹಾಕಿದ್ದೇವೆ ಮತ್ತು ಏನು ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ......

ಶ್ರೀ ಬಸವರಾಜ ರಾಯರೆಡ್ಡಿ : ಇನ್ನು ಸ್ವಲ್ಪ ದಿವಸ ತಡೆದರೆ ನಮ್ಮ ಕಡೆ ಜನರೆಲ್ಲಾ ಊರನ್ನು ಬಿಟ್ಟು ಹೊರಟುಹೋಗುತ್ತಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದು ಬಹಳ ಗಂಭೀರವಾದಂಥ ಪ್ರಶ್ನೆ. ನಮ್ಮ ಹೈದರಾಬಾದ್—ಕರ್ನಾಟಕ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಮತ್ತು ಬರಗಾಲದ ಪರಿಸ್ಥಿತಿ ಇದ್ದು, ನಮ್ಮ ಕಡೆ ಇನ್ನೂ ಕೂಡ ಬಿತ್ತನೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ಆ ಮಾತನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಚರ್ಚೆ ಆಗಬಾರದೆಂದು ನಾನು ಹೇಳುವುದಿಲ್ಲ. ಚರ್ಚೆಯಾದ ತಕ್ಷಣ ಮಳೆ ಬಂದುಬಿಡುತ್ತದೆಂದು ಕೂಡ ಹೇಳುವುದಿಲ್ಲ. ನಾನು ಚರ್ಚೆಯ ದೃಷ್ಟಿಯಿಂದ ಹಾಗೆ ಹೇಳಿದೆ. ಸರ್ಕಾರದ ವತಿಯಿಂದ ನಡೆಸತಕ್ಕಂಥ ಕಾರ್ಯಕ್ರಮಗಳ ವಿಚಾರದಲ್ಲಿ ತಮ್ಮ ಕಾಳಜಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ಕಾಳಜಿ ಬಗ್ಗೆ ನನಗೆ ಗೌರವವಿದೆ. ನಾವು ಕೂಡ ಅಷ್ಟೇ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡತಕ್ಕಂಥ

ದೃಷ್ಟಿಯಿಂದ ತಾವು ಆ ರೀತಿ ಹೇಳತಕ್ಕಂಥ ಅವಶ್ಯಕತೆಯಿದೆ. ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಬರಗಾಲವಿದ್ದರೂ ಹಣ ಬಿಡುಗಡೆ ಮಾಡಿಲ್ಲ. ಆದುದರಿಂದ, ಬಹಳ ತೊಂದರೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ : ಇದರ ಬಗ್ಗೆ ನಾನು ಒಂದು ಅಭಿಪ್ರಾಯ ಕೊಡುತ್ತೇನೆ. ಸದನದಲ್ಲಿ ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂಥಾದ್ದು ಒಂದು ವಿಚಾರ. ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳನ್ನೊಳಗೊಂಡಂತೆ ತಮ್ಮೆಲ್ಲರನ್ನೂ ಕೂಡ ಪ್ರತ್ಯೇಕವಾಗಿ ಕರೆದು ಮಾತನಾಡಿದ್ದೇವೆ. ಕಂದಾಯ ಸಚಿವರು ಈ ಸದನದಲ್ಲಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬೀದರ್‌ನಲ್ಲಿ ಬರಗಾಲ ಬಂತು, ಮಳೆ ಬಂತು, ಜನರು ಸತ್ತರು, ಸರ್ಕಾರ ಏನೂ ಮಾಡಲಿಲ್ಲ. ಜನರಿಗೆ ಯಾರೂ ನೀರು ಕೊಟ್ಟಿಲ್ಲ. ಒಂದು ದುಡ್ಡು ಸಹ ಬಿಡುಗಡೆ ಮಾಡಿಲ್ಲ. ಮಾನ್ಯ ಖರ್ಗೆಯವರು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಅದನ್ನು ನಾವು ಬರೀ ಪತ್ರಿಕೆಗಳಲ್ಲಿ ಓದುತ್ತಿದ್ದೇವೆಯೇ ಹೊರತು ದುಡ್ಡು ಬಿಡುಗಡೆಯಾಗಿಲ್ಲ, ಕೆಲಸವೂ ಆಗಿಲ್ಲ. ಇದರ ಬಗ್ಗೆ ಪತ್ರಿಕೆಗಳಲ್ಲಿ ಬಹಳ ಚೆನ್ನಾಗಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಗುರುಪಾದಪ್ಪನವರೇ, ಇದರ ಬಗ್ಗೆ ಚರ್ಚೆಯಾಗಬಾರದೆಂದು ನಾನು ಹೇಳುತ್ತಿಲ್ಲ. ಕಾರ್ಯಕ್ರಮ ತೆಗೆದುಕೊಳ್ಳುವ ದೃಷ್ಟಿಯಿಂದ ನಿಮ್ಮನ್ನು ಪ್ರತ್ಯೇಕವಾಗಿ ಕರೆದು ಚರ್ಚೆ ಮಾಡುತ್ತೇವೆ. ಆ ವಿಷಯವನ್ನು ಸದನದಲ್ಲಿ ಚರ್ಚೆ ಮಾಡಬಾರದೆಂದು ಅಲ್ಲ. ಇಲ್ಲಿಯೇ ಆಗಲಿ ಅಥವಾ ಖಾಸಗಿಯಾಗಿ ಕರೆಸಿ ಮಾತನಾಡೋಣ. ಆದರೆ ವಿಷಯ ಅದಲ್ಲ. ಆದರೆ, ಈಗ ಮಾತನಾಡುವುದು ಮುಖ್ಯ. ಆದುದರಿಂದ, ನಾವು ಅದಕ್ಕೆ ಸರಿಯಾಗಿರತಕ್ಕಂಥ ಒಂದು ಕಾಲ ಇಟ್ಟು ಅಧಿವೇಶನವನ್ನು ಕರೆಯುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ 'ಆಶ್ರಯ' ಯೋಜನೆಯಡಿಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಸಾವಿರ ಮನೆಗಳನ್ನು ಕಟ್ಟುವುದಕ್ಕೆ 40–50 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ಆದರೆ, ಐದು ಮನೆಗಳನ್ನು ಸಹ ಕಟ್ಟಿಲ್ಲ. ಈಗ ಕುಣಿಗಲ್ ಹಗರಣ ಇದೆ. ಇದರಲ್ಲಿ ನಿಮ್ಮ ಸಚಿವರೊಬ್ಬರ ಕೊಲೆಯ ಮೊಕದ್ದಮೆಯ ಕೈವಾಡ ಇದ್ದು, ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕಾಗಿದೆ. ಇದರ ಬಗ್ಗೆ ರಾಜ್ಯಾದ್ಯಂತ ಒಂದು ರೀತಿಯ ವಾತಾವರಣ ಉಂಟಾಗಿದೆ. ಈ ವಿಷಯ ಅಗತ್ಯವಾಗಿ ಇರತಕ್ಕಂಥಾದ್ದು. ಅಲ್ಲದೆ, ಕಾವೇರಿ ಜಲ ವಿವಾದ, ಕುಣಿಗಲ್ ಹಗರಣ, ಮೆಡಿಕಲ್ ಮತ್ತು ಡೆಂಟಲ್ ಕಾಲೇಜುಗಳನ್ನು ಕೊಟ್ಟಿರತಕ್ಕಂಥಾದ್ದು, ಮತ್ತು ಅನೇಕ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಅಗತ್ಯವಾಗಿ ಚರ್ಚೆಯಾಗಬೇಕಾಗಿದೆ. ಆದುದರಿಂದ, ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮೆಡಿಕಲ್ ಕಾಲೇಜುಗಳನ್ನು ಕೊಟ್ಟು ದುಡ್ಡನ್ನು ಹೊಡೆದಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಬಂಧು–ಬಳಗದವರಿಗೆ ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದ್ದಾರೆ, ಜನರ ಆಸ್ತಿಯನ್ನು ಲೂಟಿ ಮಾಡಿದ್ದಾರೆ, ಹೆಂಡದ ದೊರೆಗಳಿಗೆ ಮೆಡಿಕಲ್ ಕಾಲೇಜುಗಳನ್ನು ಕೊಟ್ಟು ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುವುದಕ್ಕೋಸ್ಕರ...........

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನೀವು ಮೆಡಿಕಲ್ ಕಾಲೇಜನ್ನು ಕೊಟ್ಟಿಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಮಾಡಿದರು ಎಂದು ನೀವೂ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ನೀವು ಕೊಟ್ಟಿಲ್ಲವೆ? ಮೈಸೂರಿನಲ್ಲಿ ನೀವು ಕೊಟ್ಟಿಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಬಂಧು ಬಳಗಕ್ಕೆ ಕೊಟ್ಟಿದ್ದೀರಿ. ನೀವು ಸಾರ್ವಜನಿಕರ, ಸರ್ಕಾರದ ಆಸ್ತಿಯನ್ನು ಲೂಟಿ ಮಾಡುತ್ತಿದ್ದೀರಿ.

(ಗೊಂದಲ)

ಬಿ.ಎಸ್. ಯಡಿಯೂರಪ್ಪ : ಹೆಂಡದ ದೊರೆಗಳಿಗೆ ಮೆಡಿಕಲ್ ಕಾಲೇಜನ್ನು ನೀವು ಕೊಟ್ಟಿದ್ದೀರಿ. ನಿಮ್ಮ ಬಂಧು ಬಳಗಕ್ಕೆ ಈ ರಾಜ್ಯದ ಬೊಕ್ಕಸವನ್ನು ಲೂಟಿ ಮಾಡುವುದಕ್ಕೆ ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : 3 ಕೋಟಿ ರೂ. ಸ್ಯಾಂಕ್ಷನ್ ಆಗಿದೆ. ಅದಕ್ಕೆ ನೀವು ದುಡ್ಡು ಕೊಡುತ್ತಿದ್ದೀರಿ. 170 ಎಕರೆಯನ್ನು ನಿಮ್ಮ ಸ್ವಂತಕ್ಕೆ ಕೊಡುತ್ತಿದ್ದೀರಿ. ಈ ಸರ್ಕಾರದ ಹಣ ಯಾರ ಆಸ್ತಿ ನಿಮ್ಮ ಸ್ವಂತ ಆಸ್ತಿಯೇ? ಈ ಕರ್ನಾಟಕ ರಾಜ್ಯದ ಹಣ ನಿಮ್ಮ ಸ್ವಂತ ಆಸ್ತಿ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : 3 ಕೋಟಿ ರೂ. ಸರ್ಕಾರದ ಹಣ ವಿಶ್ವ ಬ್ಯಾಂಕ್‌ನಿಂದ ಬಂದಿರತಕ್ಕದ್ದು ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮೆಡಿಕಲ್ ಕಾಲೇಜನ್ನು ಅವರು ಕೊಟ್ಟಿದ್ದರೆ ಅದರ ಮೇಲೆ ನೀವು ಚರ್ಚೆ ಮಾಡಿ ನೀವು ಕೊಟ್ಟಿದ್ದರೆ ಏತಕ್ಕೆ ಕೊಟ್ಟಿರಿ ಎಂಬುದನ್ನು ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂಗೆ ಕೊಟ್ಟವರು ಈಗಾಗಲೇ ಮನೆಗೆ ಹೋಗಿದ್ದಾರೆ. ಈಗ ನೀವೂ ಮನೆಗೆ ಹೋಗುತ್ತೀರಾ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗ ಮೆಡಿಕಲ್ ಕಾಲೇಜು ಸ್ಯಾಂಕ್ಷನ್ ಆಗಿ 10 ವರ್ಷ ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ಮೆಡಿಕಲ್ ಕಾಲೇಜ್‌ನ ಕಟ್ಟಡವನ್ನು ಪಿ.ಡಬ್ಲ್ಯು.ಡಿ.ನವರು ಕಟ್ಟುತ್ತಿದ್ದಾರೆ. ಕಾಲೇಜು ಮಂಜೂರಾಗುವುದಕ್ಕೆ ಮುಂಚಿತವಾಗಿಯೇ ಕಟ್ಟಡವನ್ನು ಕಟ್ಟುತ್ತಿದ್ದಾರೆ. ಇದು ಯಾರ ದುಡ್ಡು?

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪನವರೇ ನೀವು ಬರೆದು ಕಳುಹಿಸಿಕೊಡಿ. ನಾನು ಅದಕ್ಕೆ ಸಮಯವನ್ನು ಗೊತ್ತುಮಾಡಿ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಚರ್ಚೆಗೆ 15 ದಿವಸ ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಕೊಡುತ್ತೇನೆ, ನೀವು ಬರೆದು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ. ಆಶ್ರಯ ಯೋಜನೆಯಲ್ಲಿ 40 ಕೋಟಿ ರೂಗಳನ್ನು ಮನೆ ಕಟ್ಟುವುದಕ್ಕೆ ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ. ಇದು ಯಾರ ಅಪ್ಪನ ಮನೆಯ ದುಡ್ಡು?

(ಗೊಂದಲ)

ಅಧ್ಯಕ್ಷರು : ಈಗ ಸಭಾ ನಾಯಕರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಒಂದೊಂದು ಸಾವಿರ ಮನೆಯನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ನೂರು ಮನೆ ಕೂಡ ಆಗಿಲ್ಲ. ಇದು ಯಾರ ದುಡ್ಡು? ಅವರಿಗೆ ಈಗಾಗಲೇ ದುಡ್ಡು ಕೊಟ್ಟಿದ್ದೀರಿ. ಇದು ಯಾರ ದುಡ್ಡು?

(ಗೊಂದಲ)

ಅಧ್ಯಕ್ಷರು : ಏಳನೆಯ ಅಧಿವೇಶನ ಪ್ರಾರಂಭವಾಗಿ 3 ವರ್ಷ ಆದಮೇಲೂ ಕೂಡ ಇನ್ನೂ ನಾವು ನಮ್ಮ ಕಾರ್ಯ ವಿಧಾನದ ಅತ್ಯಂತ ಪ್ರಮುಖವಾದ ವಿಧಿಯನ್ನು ಅನುಸರಿಸುತ್ತಿಲ್ಲ. ಅಂದರೆ ಒಬ್ಬ ಮಾನ್ಯ ಸದಸ್ಯರು ನನ್ನ ಅಪ್ಪಣೆಯನ್ನು ಪಡೆದು ಈ ಫ್ಲೋರನ್ನು ತಮ್ಮ ಕೈಗೆ ತೆಗೆದುಕೊಂಡಿರುವಾಗ ನೀವು ಆ ಫ್ಲೋರನ್ನು ಅವರಿಂದ ವಾಪಸ್ಸು ಪಡೆಯಬೇಕಾದರೆ ಮೊದಲು ಅವರನ್ನು ಕೇಳಿ ಅನಂತರ ಮಾತನಾಡಬೇಕು. ಅವರು ನಿಂತೇ ಇದ್ದಾರೆ. ನೀವು ನಿಂತಿದ್ದೀರಿ. ಇದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಕಲ್ಲುಬಂಡೆಯಂಥ ಸರ್ಕಾರ. ಏನು ಮಾಡುವುದು?

ಅಧ್ಯಕ್ಷರು : ಅದು ಅಭಿಪ್ರಾಯದ ಮಾತು. ನಿಮ್ಮ ಅಭಿಪ್ರಾಯ ಒಂದು, ಅವರ ಅಭಿಪ್ರಾಯ ಒಂದು. ಅಭಿಪ್ರಾಯಗಳು ಪರಸ್ಪರ ಪರ – ವಿರೋಧ ಇಲ್ಲದಿದ್ದರೆ ಚೆನ್ನಾಗಿರುವುದಿಲ್ಲ. ಈಗ ನೀವು ಹೇಳಿರತಕ್ಕದ್ದು ಯಾವುದೂ ಕೂಡ ಕಡತಕ್ಕೆ ಹೋಗಿಲ್ಲ, ರಿಪೋರ್ಟ್ ಕೂಡ ಆಗುವುದಿಲ್ಲ.ನಾಳೆ ಪತ್ರಿಕೆಯವರು ಏನು ಬರೆಯುತ್ತಾರೆಂದರೆ, ಸದನದಲ್ಲಿ ಗೊಂದಲದ ಸನ್ನಿವೇಶ ಉಂಟಾಯಿತು. ಏಕ ಕಾಲದಲ್ಲಿ ಇಂಥಂಥ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು. ಅವರು ಏನು ಮಾತನಾಡುತ್ತಿದ್ದರು ಎಂಬುದು ಯಾರಿಗೂ ಕೇಳಿಸುತ್ತಿರಲಿಲ್ಲ ಎಂದು ಬರೆಯುತ್ತಾರೆ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್, ಇದಕ್ಕೇ ಏನು ನೀವು ಈ ಸದನವನ್ನು ಎಕ್ಸ್‌ಟೆಂಡ್ ಮಾಡಿ ಎಂದು ಕೇಳುತ್ತಿರುವುದು. ಎಲ್ಲರಿಗೂ ಅನುಕೂಲವಾಗುವಂತೆ ಸಮರ್ಪಕವಾದ ರೀತಿಯಲ್ಲಿ ನಾವು ಕಾರ್ಯ ವಿಧಾನವನ್ನು ರೂಪಿಸಿಕೊಳ್ಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳು ಈಲ್ಡ್ ಆದರು ಎಂದು ತಿಳಿದುಕೊಂಡು ಅವರು ಕೂತಮೇಲೆ ಪ್ರಸ್ತಾಪ ಮಾಡಿದೆವು. ಮಾನ್ಯ ಮುಖ್ಯಮಂತ್ರಿಯವರು ಈಲ್ಡ್ ಆದಮೇಲೆ ನಾನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ರಮಾನಾಥರೈ : ಈಗಲೂ ಅವರು ಈಲ್ಡ್ ಆಗಿಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಈಲ್ಡ್ ಆಗಲಿಲ್ಲ. ಈಗಲೂ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ಅಧ್ಯಕ್ಷರೇ, ಹಲವಾರು ವಿಚಾರಗಳು ಚರ್ಚಿಸಿ ಇವೆ ಎನ್ನತಕ್ಕ ಮಾತನ್ನು ಒಪ್ಪೋಣ. ಚರ್ಚೆಗೆ ಮುಕ್ತವಾಗಿರತಕ್ಕಂಥ ವಾತಾವರಣದ ಸೃಷ್ಟಿ ಕಾಲವನ್ನು ಸರಿಯಾಗಿ ಇಟ್ಟೇ ಈ ಸದನದಲ್ಲಿ ಚರ್ಚೆಯಾಗತಕ್ಕಂಥಾದ್ದು ಅವಶ್ಯಕತೆ ಇದೆ. ನಾವು ಇವತ್ತು ಈ ಸಂದರ್ಭದಲ್ಲಿ ಬರೀ ಒಂದು ದಿನದ ಇಲ್ಲವೇ ಹೆಚ್ಚು ಎಂದರೆ ಎರಡು ದಿನದ ಅಧಿವೇಶನವೆಂದು ಏನು ಇಟ್ಟಿದ್ದೇವೆ. ಇದರಲ್ಲಿ ಕೆಲವು ಆರ್ಡಿನೆನ್ಸ್ ಏನು ಹೊರಡಿಸಿದ್ದೇವೆ, ರೀಪ್ಲೇಸಿಂಗ್ ಬಿಲ್ಸ್ ಇಟ್ಟುಕೊಳ್ಳಬೇಕು ಎಂಬುದನ್ನೂ ವಿಚಾರ ಮಾಡಿ ಇದರ ಜೊತೆಗೆ ಹಾಕಿಕೊಂಡಿದ್ದೇವೆ. ಅದಕ್ಕಿಂತ ಮುಖ್ಯವಾಗಿ 76ನೇ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಏನು ಇದೆ, ಅದಕ್ಕೆ ರ್‍ಯಾಟಿಫಿಕೇಷನ್ ತರುವುದಕ್ಕೋಸ್ಕರ ಬಂದಿರತಕ್ಕಂತಹ ವಿಚಾರದ ಹಿನ್ನೆಲೆಯಲ್ಲಿ ನಾವು ಇದನ್ನು ಸ್ಥಿರೀಕರಿಸಿ ಇಂದೇ ದೆಹಲಿಗೆ

ಕಳುಹಿಸುವಂತಹ ಅವಶ್ಯಕತೆ ಇದೆ. ಡೆಲ್ಲಿ, ಪಾಂಡಿಚೇರಿಗೆ Statehood ಬಂತು ಎಂದರೆ ಅವರಗಳಿಗೆ ಓಟು ಕೊಡತಕ್ಕಂಥ ಅಧಿಕಾರ ಬರುತ್ತದೆ. 13ನೇ ತಾರೀಖು ತಮ್ಮ ಮತವನ್ನು ಚಲಾವಣೆ ಮಾಡತಕ್ಕಂಥ ವಿಚಾರ ಏನು ಇದೆ ಅದು ಅತಿ ಜರೂರಾಗಿರತಕ್ಕಂತಹ ವಿಚಾರ. ಮೊದಲು ಅದನ್ನು ಸ್ಥಿರೀಕರಿಸಿ, ರ್ಯಾಟಿಫೈ ಮಾಡಿ ಅದನ್ನು ಮೊದಲು ಕಳಿಸೋಣ. ಇದು ಪಕ್ಷಾತೀತವಾಗಿರತಕ್ಕಂತಹ ವಿಚಾರ. ನಮ್ಮ ಹಾಗೆ ಅವರಿಗೂ ಮತದಾನ ಹಕ್ಕು ಕೊಡತಕ್ಕಂಥಾದ್ದು, ಅವರಿಗೆ ಮುಕ್ತವಾದ ಸದಾವಕಾಶ ಕಲ್ಪಿಸಿಕೊಡತಕ್ಕಂತಹ ವಿಚಾರ ಇದರಲ್ಲಿ ಅಡಗಿದೆ. ಅದನ್ನು ಬಿಟ್ಟರೆ ಇದರಲ್ಲಿ ಬೇರೆ ಏನೂ ಇಲ್ಲ. ಇದಕ್ಕೆ ಮಂಜೂರಾತಿ ಕೊಡುವುದಕ್ಕೋಸ್ಕರ ಇವತ್ತು ನಾವು ಮುಖ್ಯವಾಗಿ ಅಧಿವೇಶನವನ್ನು ಕರೆದಿದ್ದೇವೆ. ಇದೇ ಸಂದರ್ಭದಲ್ಲಿ ಆರ್ಡಿನೆನ್ಸಸ್ ತಮಗೆ ಗೊತ್ತಿರುವ ಹಾಗೆ ಕಾನೂನಿನ ವಿಚಾರವಿದೆ, ಆರ್ಡಿನೆನ್ಸಸ್ ಹೊರಡಿಸಿದ್ದರೆ ನಾವು ಶಾಸನ ಸಭೆ ಕರೆದ ತಕ್ಷಣ ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್‌ನಿಂದ ಅದನ್ನು ಸಭೆ ಮುಂದೆ ಇಡಲೇಬೇಕೆಂಬ ದೃಷ್ಟಿಯಿಂದ 4–5 ಅನ್ನು ಇಲ್ಲಿ ಇಟ್ಟಿದ್ದೇವೆ. ಅದರಲ್ಲಿ ಕೆಲವು ಲ್ಯಾಪ್ಸ್ ಆಗತಕ್ಕಂಥಾದ್ದು ಇದೆ. ಪ್ರಾಮುಖ್ಯವಾಗಿರತಕ್ಕಂಥಾದ್ದು ಎಂಟ್ರಿ ಟ್ಯಾಕ್ಸ್ ಆನ್ ಗೂಡ್ಸ್ ಏನು ಇದೆ; ಅದನ್ನು ತಮ್ಮ ಕಾಲದಲ್ಲೇ ಮಾಡಿ ಕೇಂದ್ರಕ್ಕೆ ಕಳಿಸಿರತಕ್ಕಂಥಾದ್ದು ಅವೇ ಐಟಂಸ್‌ಗಳನ್ನು ನಾವು ತರಿಸಿದ ಮೇಲೆ ಕೆಲವು ಐಟಂಗಳನ್ನು ಬಿಟ್ಟು ಉಳಿದಿರತಕ್ಕಂಥಾದ್ದನ್ನು ಜಾರಿಗೆ ಕೊಟ್ಟಿದ್ದೇವೆ. ಅದು ಮುಖ್ಯವಾಗಿ ಚರ್ಚೆಯಾಗಬೇಕೆಂದು ನಾನೂ ಅಭಿಪ್ರಾಯಪಡುತ್ತೇನೆ. ಅದನ್ನು ಪಾಸ್ ಮಾಡಲೇಬೇಕೆಂಬ ದೃಷ್ಟಿಯಿಂದ ನಾವು ಇಟ್ಟಿಲ್ಲ. ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್‌ನಿಂದ ನಾವು ಇಡಲೇಬೇಕೆಂಬ ದೃಷ್ಟಿಯಿಂದ ಇಟ್ಟಿದ್ದೇವೆ. ಅದನ್ನು ಇಂಟ್ರಡ್ಯೂಸ್ ಮಾಡೋಣ. ಆರ್ಡಿನೆನ್ಸ್ ರೀಪ್ಲೇಸಿಂಗ್ ಬಿಲ್ ಅನ್ನು ರ್ಯಾಟಿಫೈ ಮಾಡಿ ಕಳಿಸೋಣ. ಆಮೇಲೆ ಚರ್ಚೆಗೆ ಇದನ್ನು ಯಾವಾಗ ಕೊಡಬೇಕೆಂಬ ಬಗ್ಗೆ ...

ಶ್ರೀ ಡಿ.ಬಿ. ಚಂದ್ರೇಗೌಡ : ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್‌ಗೆಂದು ಮಾತ್ರ ಸದನ ಕರೆಯಬೇಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವು ಅಧಿವೇಶನವನ್ನು ಕರೆದಿದ್ದೇವೆ. ಕರೆಯಲೇಬೇಕಾಗಿದೆ ಮತ್ತು ಇಲ್ಲಿ ಚರ್ಚೆಗೆ ನಾವು ಇಡಲೇಬೇಕಾಗಿದೆ. ನಮ್ಮ ರಾಜ್ಯಾಂಗದ ಪ್ರಕಾರ ನಾವು ಇಧನ್ನು ಇಲ್ಲಿ ಇಟ್ಟಿದ್ದೇವೆ. ಉಳಿದಿರತಕ್ಕಂಥಾದ್ದು ತಮಗೇ ಗೊತ್ತಿದೆ. ತಮಗೆ ಗೊತ್ತಿರುವ ಹಾಗೆ ಫಸ್ಟ್ ಬಿಲ್ಸ್ ಅನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. 3–4 ಇದ್ದಾವೆ. ಎಂಟ್ರಿ ಟ್ಯಾಕ್ಸ್ ಬಗ್ಗೆ ಈಗಾಗಲೇ ಜಾರಿಗೆ ಕೊಟ್ಟಿದ್ದೇವೆ. ಇದಾದ ಮೇಲೆ 6 ವಾರಗಳ ಕಾಲದಲ್ಲಿ ಮತ್ತೊಂದು ಆರ್ಡಿನೆನ್ಸ್ ಮಾಡತಕ್ಕಂತಹ ಸಂದರ್ಭ ಬರುತ್ತದೆ. ಈ ಸದನದಲ್ಲಿ ಚರ್ಚೆ ನಡೆಯಲಿ ಎನ್ನುವುದು ನಮ್ಮ ಆಸೆ. ಬಡವರ ಮೇಲೆ ಟ್ಯಾಕ್ಸ್ ಹಾಕಿದ್ದೀರಿ ಎಂದು ಹೇಳುವುದು ಹಾಗೂ ಇನ್ನಿತರ ಐಟಂಗಳು ಇತ್ಯಾದಿ ಇಲ್ಲಿ ಚರ್ಚೆಗೆ ಬರುತ್ತದೆ. ನಾನೇ ಸಲಹೆ ಮಾಡುತ್ತಿದ್ದೇನೆ. ಮುಂದಿನ ಸಾರಿ ಅಧಿವೇಶನ ಕರೆದಾಗ ವಿವರವಾಗಿ ಚರ್ಚೆ ಮಾಡಬಹುದು. ಎರಡೂ ಕಡೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಬಹುದು. ವಿಚಾರವನ್ನು ಚರ್ಚೆಗೆ ಒಳಪಡಿಸೋಣ. ಈ ಬಿಲ್ಲುಗಳನ್ನು ಇಲ್ಲಿ ಮಂಡಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲ. ಬೇರೆ ಬೇರೆ ವಿಚಾರ ಕೂಡ ಇದೆ. ಯಾವುದು ತೆಗೆದುಕೊಳ್ಳಬೇಕು ತೆಗೆದುಕೊಳ್ಳಬಾರದು ಎಂಬ ಬಗ್ಗೆ ಮಾನ್ಯ ಅಧ್ಯಕ್ಷರಿಗೇ ಬಿಡುತ್ತೇನೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ರ್ಯಾಟಿಫಿಕೇಷನ್ ಮಾಡಲು ಮೂವ್ ಮಾಡುತ್ತಿದ್ದೇವೆ. ಇದನ್ನು ಇವತ್ತೇ ದೆಹಲಿಗೆ ರವಾನೆ ಮಾಡತಕ್ಕಂತಹ ವಿಚಾರವಿರುವುದರಿಂದ ತಾವೆಲ್ಲರೂ ಇದಕ್ಕೆ ಒಪ್ಪಿಗೆ ಕೊಡುತ್ತೀರೆಂದು ಭಾವಿಸಿದ್ದೇನೆ. ಅಧಿವೇಶನ ಎಷ್ಟು ದಿವಸ ಕರೆಯಬೇಕು 15 ದಿವಸ, 6 ದಿವಸ, ಒಂದು ವಾರ ಸಾಕಾಗುವುದಿಲ್ಲ, ಇತ್ಯಾದಿ, ಇತ್ಯಾದಿ ಏನು ಇದೆ, ಮತ್ತು ಹಲವಾರು ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇದ್ದರೆ ಅದಕ್ಕೆಲ್ಲಾ ಕೆಲವು ಕಾಲ ಬೇಕಾಗುತ್ತದೆ. ಪ್ರತ್ಯೇಕವಾಗಿ ಅಧಿವೇಶನವನ್ನು ಕರೆಯುತ್ತೇವೆ. ಇದರಲ್ಲಿ ಮುಚ್ಚಿಡುವಂತಹ ಇಲ್ಲವೇ ಮುಚ್ಚಿಡಬೇಕೆಂಬ ದೃಷ್ಟಿಯಿಂದ

ಈ ಮಾತನ್ನಾಡುತ್ತಿಲ್ಲ. ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಎಂಟ್ರಿ ಟ್ಯಾಕ್ಸ್ ಬಗ್ಗೆ ಚರ್ಚೆ ಮಾಡುವುದಿಲ್ಲವೆಂದರೆ ಅದಕ್ಕೆ ಪ್ರತ್ಯೇಕವಾದ ಕಾಲ ಕೊಡುತ್ತೇನೆ. ಆದರೆ ಕಾನ್‌ಸ್ಟಿಟ್ಯೂಷನ್ ವಿಚಾರದಲ್ಲಿ ರ್‍ಯಾಟಿಫಿಕೇಷನ್ ಮಾಡಬೇಕಾಗುತ್ತದೆ. Then remains what is to be discussed for the day i.e. today, or at best on Monday ಎನ್ನುವ ವಿಚಾರವನ್ನು ತಾವು ಆಡಬಹುದು. ನನಗೆ ಗೊತ್ತಿದೆ, ಕಾವೇರಿ ವಾಟರ್ ಡಿಸ್‌ಪ್ಯೂಟ್ ಆಗಲಿ ಅಥವಾ ಮತ್ತೊಂದು ವಿಚಾರವಾಗಲಿ, ಅದರ ಇತಿಮಿತಿಯೊಳಗೆ ಒಳಪಟ್ಟು ಯಾವರೀತಿ ಪ್ರಸ್ತಾಪ ಮಾಡಬೇಕೆನ್ನುವ ಬಗ್ಗೆ ನಾನು ಹೇಳಿಕೊಡಬೇಕಾದ ಅವಶ್ಯಕತೆ ಇಲ್ಲ. ತಮ್ಮ ಅಪಾರವಾಗಿರತಕ್ಕಂಥ ಹಲವಾರು ವರ್ಷದ ಅನುಭವದ ಹಿನ್ನಲೆಯಲ್ಲಿ ಪಕ್ಷಾತೀತವಾಗಿ ಈ ಸಭೆ ನಡೆದುಕೊಂಡು ಬಂದಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಇತಿಮಿತಿ ಉಳಿದೇ ಇಲ್ಲ. ನಮಗೆ ಆಗುವ ಅನ್ಯಾಯ ಆಗಿಹೋಗಿದೆ. ಇನ್ನು ಇತಿಮಿತಿ ಎಲ್ಲಿ ಉಳಿದಿದೆ ? ನಾವು ಹೇಳುತ್ತಿರುವುದು ನ್ಯಾಯಮಂಡಲಿಗೆ ಬಹಿಷ್ಕಾರ ಹಾಕಬೇಕೆಂದು ಒಂದೇ ಸಮನೆ ತಮಗೆ ಹೇಳುತ್ತಿದ್ದೇವೆ. ಇನ್ನು ಇತಿಮಿತಿ ಎಲ್ಲಿ ಉಳಿದಿದೆ. ನ್ಯಾಯಮಂಡಲಿಯಿಂದ ನಮಗೆ ಏನೂ ಲಾಭ ಬರುವುದಿಲ್ಲ. ಇವತ್ತು ನಾನು ಅಂತಿಮವಾಗಿ ನ್ಯಾಯಮಂಡಲಿಯ ತೀರ್ಪನ್ನು ಸುಡುತ್ತೇನೆ. ಒಂದು ತೀರ್ಮಾನಕ್ಕೆ ತಾವು ಬನ್ನಿ, ಏನೆಂದರೆ, ಈ ನ್ಯಾಯಮಂಡಲಿಯಲ್ಲಿ ನಮಗೆ ನಂಬಿಕೆ ಇಲ್ಲವೆಂದು. ತಾವು ನಮ್ಮನ್ನೂ ಅನೇಕಸಲ ಕರೆದಾಗ ನಾವು ಸ್ಪಷ್ಟವಾಗಿ ಹೇಳಿದ್ದೇನೆ.ಇದರಲ್ಲಿ ಇನ್ನು ಬೇರೆ ಮಾತೇ ಇಲ್ಲ. ಆದ್ದರಿಂದ ಅವರಿಂದ ನಮಗೆ ಏನೋ ಅನುಕೂಲವಾಗುತ್ತದೆಂದು ಹೇಳಿ ನಾವು ಕಾಯ್ದುಕೊಂಡು ಕುಳಿತುಕೊಳ್ಳುವುದಾದರೆ ನಾವು ನಿಜವಾಗಿಯೂ ಈ ನಾಡಿನ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ನಾನು ಪುನಃ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಹೇಳಬೇಕಾಗಿದೆ. ಅದು ಅಭಿಪ್ರಾಯದ ಮಾತಾಗುತ್ತದೆ. ಅದಕ್ಕಾಗಿ ನಾನು ಹೇಳಿದೆ, ಮಾನ್ಯ ಹಿರಿಯ ಸದಸ್ಯರಾದ ನಾಗರಾಜ್‌ರವರಿಗೆ ನಾನು ಹೇಳುವುದು ಏನೆಂದರೆ, ಆ ವಿಚಾರವನ್ನು ಹೇಳತಕ್ಕಂಥ ಸಂದರ್ಭದಲ್ಲಿಯೂ ಕೂಡ ಈ ಸದನದಲ್ಲಿ ಹೇಳಬೇಕಾಗಿದೆ ಎನ್ನತಕ್ಕಂಥದ್ದು ತಮ್ಮ ಆಶೆ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ಅದು ಎಷ್ಟರಮಟ್ಟಿಗೆ ಹೇಗೆ ಎನ್ನತಕ್ಕಂಥ ವಿಚಾರ ತಾವು ಹೇಳುವ ಹಾಗೆ ಇದ್ದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ಇವತ್ತೇ ಸಿದ್ಧವಾಗಿದ್ದೇನೆ. ಆದರೆ ಬಹಳಷ್ಟು ದೀರ್ಘಕಾಲದ ಚರ್ಚೆಗೆ ಈ ವಿಚಾರವನ್ನು ಒಳಪಡಿಸಿದರೆ ಒಳ್ಳೆಯದೇ ಎನ್ನತಕ್ಕಂಥದ್ದನ್ನು ನಿಮ್ಮ ಅನುಭವಕ್ಕೇ ಬಿಡುತ್ತೇನೆ. ಹಿಂದೆ ನಡೆದ ಚರ್ಚೆಯ ಬಗ್ಗೆಯೂ ಬಿಡುತ್ತೇನೆ. ಹಿಂದೆ ಹೇಳಿದ ಮಾತನ್ನು ಇವತ್ತು ಕೂಡ ಹೇಳುತ್ತಿದ್ದೇನೆ, ನಾನು ಅದರ ಬಗ್ಗೆ ಹೆಚ್ಚಿನ ವಿಚಾರಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ.

12.50 ಪಿ.ಎಂ.

ಇನ್ನು ಕುಣಿಗಲ್ ಪ್ರಕರಣ ಬಗ್ಗೆ ಹೇಳುವುದಾದರೆ ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಹೊಸದಾಗಿ ಆರಿಸಿ ಬಂದಿದ್ದಾರೆ. ಬಹಳ ಸಂತೋಷಪಡುತ್ತೇನೆ, ಅವರನ್ನು ಸ್ವಾಗತ ಮಾಡುತ್ತೇನೆ. ಕುಣಿಗಲ್ ಘಟನೆಯ ವಿಚಾರದಲ್ಲಿ ಮತ್ತೊಂದು ವಿಚಾರ ಏನಿದೆ, ಅದರ ಬಗ್ಗೆಯೂ ಪ್ರಸ್ತಾಪ ಮಾಡಬೇಕೆನ್ನತಕ್ಕಂಥ ವಿಚಾರ ಕೂಡ ತಾವು ಹೇಳಿದ್ದೀರಿ. ಅದು ಯಾವ ರೂಪದಲ್ಲಿ ಹೇಗೆ ತರಬೇಕೆಂದು ಪ್ರಯತ್ನ ಮಾಡಿದ್ದೀರೋ, ನಾವು ಎಷ್ಟರಮಟ್ಟಿಗೆ ಉತ್ತರ ಕೊಡಬೇಕೆನ್ನುವ ವಿಚಾರದ ಬಗ್ಗೆಯೂ ಕೂಡ ಸರ್ಕಾರ ಸಿದ್ಧವಾಗಿದೆ. ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿಲ್ಲ. ನಾನು ಅದಕ್ಕಾಗಿಯೇ ಹೇಳುವುದು, ಕಾನ್‌ಸ್ಟಿಟ್ಯೂಷನ್ ಬಗ್ಗೆ ಕೆಲವು ಪೇಪರ್ಸ್ ಅನ್ನು ಸಭೆಯ ಮುಂದೆ ಮಂಡನೆ ಮಾಡಿ ಉಳಿದಿರತಕ್ಕಂಥ ವಿಚಾರಗಳನ್ನು ಇವತ್ತೇ ನಾವು ಮುಕ್ತಾಯ ಮಾಡಬೇಕಾಗಿದೆ. ಅನಂತರ ಬೇರೆ ವಿಚಾರಗಳು ಮತ್ತೊಂದು ಏನೇನು ಇದೆ ಅವುಗಳನ್ನು ನಾವು ತೆಗೆದುಕೊಳ್ಳಲು ಮತ್ತೆ ಅಧಿವೇಶನ ಕರೆಯುವ ಬಗ್ಗೆ ದಯವಿಟ್ಟು ನಮಗೆ ಬಿಡಿ. ನಾನು ಈಗ ಮಾತು ಕೊಟ್ಟಿದ್ದೇನೆ. ಅದರಂತೆ ಸದನವನ್ನು ಕರೆಯೋಣ. ಕರೆದ ಮೇಲೆ ವಿವರವಾದ ಚರ್ಚೆ ಮಾಡೋಣ. ಅಷ್ಟರೊಳಗೆ

ಮಾನ್ಯ ಬೈರೇಗೌಡರೇ ತಾವು ಅಮೇರಿಕಾಕ್ಕೆ ಹೋಗಿಬನ್ನಿ. ತಮ್ಮ ಪ್ರಯಾಣ ಸುಖಪ್ರದವಾಗಿರಲಿ; ತಾವು ಹೋಗಿ ಬನ್ನಿ. ತಾವು ಇನ್ನೂ ಕೂಡ ಆರೋಗ್ಯವಂತರಾಗಿ, ನಾಗಾಲೋಟದಿಂದ ವಾಪಸ್ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : – ತಾವು ಅವರನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋದರೆ ಮತ್ತೆ ಅದು ಒಂದು ದೊಡ್ಡ ಸಮಸ್ಯೆಯಾಗಬಹುದು.

ಶ್ರೀ ಎಸ್. ಬಂಗಾರಪ್ಪ : ನೀವು ಹೋದಮೇಲೆ ಒಂದೇ ಒಂದು ಷರತ್ತು, ಅದೇನೆಂದರೆ ನೀವು ಅಲ್ಲಿಂದ ಬರಬೇಕಾದರೆ ನಿಧಾನವಾಗಿ ಬರುವಂತಿಲ್ಲ. ನಾಗಾಲೋಕದಿಂದ ಬರತಕ್ಕಂಥ ಆಶಯ ನಮ್ಮೆಲ್ಲರ ಮನಸ್ಸಿನಲ್ಲಿದೆ. ಆದ್ದರಿಂದ ತಾವು ಸುಖವಾಗಿ ಹೋಗಿಬರಬೇಕೆನ್ನುವ ಮಾತನ್ನು ನಾನು ಹೇಳಿ ಉಳಿದಿರತಕ್ಕಂಥ ವಿಚಾರಗಳ ಬಗ್ಗೆ ಏನೂ ಪ್ರಸ್ತಾಪ ಮಾಡಲಾರೆ. ಇಷ್ಟಕ್ಕೆ ಸಾಕೆಂದು ಹೇಳುತ್ತೇನೆ.

ಅಧ್ಯಕ್ಷರು : ಒಂದು ಸಮಾಧಾನ ಏನೆಂದು ಹೇಳಿದರೆ ಅಮೇರಿಕಾಕ್ಕೆ ಹೋದವರೆಲ್ಲರಿಗೂ ವಾಪಸ್ ಬನ್ನಿ ಎಂದು ಹೇಳುತ್ತಿದ್ದಾರೆ. ಹೋದವರೆಲ್ಲರೂ ವಾಪಸ್ ಬರಬೇಕು, ಆರೋಗ್ಯವಂತರಾಗಿ ಬನ್ನಿ ಏಡ್ ತೆಗೆದುಕೊಂಡು ಬನ್ನಿ. ನಮ್ಮ ರಾಜ್ಯಕ್ಕೆ ಏಡ್ ಬೇಕಾಗುತ್ತದೆ. ಏಡ್ ಅಂದರೆ AID.

ಶ್ರೀ ಎಸ್. ಬಂಗಾರಪ್ಪ : ತಾವು ಆ ವಿಚಾರ ಎತ್ತಿದ್ದಕ್ಕೆ ಅದರ ಬಗ್ಗೆ ಏನು ಎನ್ನುವುದನ್ನು ನಾನು ವಿವರವಾಗಿ ಸದನಕ್ಕೆ ಹೇಳತಕ್ಕಂಥ ಸಂದರ್ಭ ಬರಬೇಕು. ಮುಕ್ತ ಚರ್ಚೆಗೆ ಹಾಗೆ ಪಟ್ಟಿಮಾಡುತ್ತಾ ಹೋದರೆ ಬಹಳವಾಗಿ ಇದೆ, ಏತಕ್ಕೆಂದರೆ ಮಾನ್ಯ ಬೈರೇಗೌಡರು ಸಾಧಾರಣವಾಗಿ ಈಗಾಗಲೇ ಅವರ ಭಾಷಣವನ್ನು ಮುಗಿಸಿಬಿಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಇನ್ನು ಪ್ರಾರಂಭವನ್ನೇ ಮಾಡಿಲ್ಲ. ಮುಗಿಸಿದ್ದೇನೆಂದು ಹೇಳಿದರೆ ಹೇಗೆ ಒಪ್ಪಿಕೊಳ್ಳುವುದು?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರು ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಪಟ್ಟಿಯನ್ನು ನೋಡಿದರೆ ಇದು ಒಂದೆರಡು ದಿವಸದಲ್ಲಿ, ಒಂದು ವಾರದಲ್ಲಿ ಮುಗಿಯುವುದಿಲ್ಲ. ಅಷ್ಟೊಂದು ದೊಡ್ಡ ಪಟ್ಟಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಎರಡು ಪಟ್ಟಿಯನ್ನು ಬೇಕಾದರೆ ಹಿಂದಕ್ಕೆ ತೆಗೆದುಕೊಂಡು ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ : ಇಷ್ಟು ಹೇಳಿ ಇಷ್ಟಕ್ಕೆ ಮಿತಿಗೊಳಿಸಿ, ಸದನವನ್ನು ಮುಂದೆ ಕರೆಯೋಣ ಸದನವನ್ನು ಕರೆಯತಕ್ಕಂಥದ್ದು ನಮ್ಮ ಧರ್ಮ. ಇಷ್ಟು ವಿಚಾರಗಳನ್ನು ಹೇಳಿ ತಾವು ಯಾವ ವಿಚಾರವನ್ನು ಎತ್ತಿಕೊಳ್ಳಬೇಕೆಂದು ಅಪ್ಪಣೆ ಕೊಡಿಸುತ್ತೀರೋ......

ಶ್ರೀ ಹೆಚ್. ಏಕಾಂತಯ್ಯ : ಜನವರಿಗಿಂತ ಮೊದಲು ಅಧಿವೇಶನವನ್ನು ಕರೆಯುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಜನವರಿ ಅಂದರೆ ಜಂಟಿ ಅಧಿವೇಶನ ಬರುತ್ತದೆ. ಪ್ರೊಫೆಸರ್ ನಂಜುಂಡಸ್ವಾಮಿಯವರ ಅಭಿಪ್ರಾಯವನ್ನು ನಾನು ಗಮನಿಸಿದ್ದೇನೆ. ಈ ವರ್ಷದಲ್ಲಿ ಇನ್ನೂ ಕೂಡ ಕುಳಿತುಕೊಳ್ಳುತ್ತೇವೆ. ಅಧಿವೇಶನ ಕರೆದ ಮೇಲೆ ಮುಂದೆ ಜಂಟಿ ಅಧಿವೇಶನಕ್ಕೆ ಹೋಗಬೇಕಾಗುತ್ತದೆ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ) : ಯಾವ ತಿಂಗಳು ಕರೆಯುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಅದು ನಮಗೆ ಬಿಡಿ. ಮಾನ್ಯ ಅಧ್ಯಕ್ಷರು ಇದ್ದಾರೆ, ವಿರೋಧ ಪಕ್ಷದ ನಾಯಕರು ಇದ್ದಾರೆ. ನಾವು ಇದ್ದೇವೆ. ನಾವೆಲ್ಲ ಕುಳಿತುಕೊಂಡು ತೀರ್ಮಾನ ಮಾಡುವುದಕ್ಕೆ ಬರುತ್ತದೆ. ಒಟ್ಟಿನಲ್ಲಿ ಅತಿ ಶೀಘ್ರವಾಗಿ ಕರೆಯುತ್ತೇವೆ. ಇನ್ನು ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನ್ನಿಂದ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳೇ ಮುಂದೆ ಬಂದು 15 ದಿವಸಗಳ ಕಾಲ ಅಧಿವೇಶನವನ್ನು ಮುಂದುವರಿಸಬೇಕೆಂದು ವಿನಂತಿ ಮಾಡಿದೆವು. ಮಾನ್ಯ ರಾಜ್ಯಪಾಲರಿಗೆ ಮನವಿ ಕೊಟ್ಟೆವು, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಮ್ಮನ್ನು ಪ್ರಾರ್ಥಿಸಿದೆವು. ವಿರೋಧ ಪಕ್ಷದಲ್ಲಿ

ಉಳಿತುಕೊಂಡು, ಇಷ್ಟೊಂದು ಗುರುತರವಾದ ಆರೋಪಗಳು ಸರ್ಕಾರದ ಮೇಲೆ ಇರುವಾಗ, ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕಾದರೆ..........

ಅಧ್ಯಕ್ಷರು : ಕೆಲವು ಮೂಲಭೂತ ವಿಚಾರಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಸ್ನೇಹಿತರು ಹಾಗು ಮಾನ್ಯ ಸಭಾ ನಾಯಕರು ಸಭೆಯ ಗಮನವನ್ನು ಸೆಳೆದಿದ್ದಾರೆ. ಸಂಸತ್ ಹೇಗೆ ತನ್ನ ವರ್ಷದ ಕಾರ್ಯಕ್ರಮವನ್ನು ನಿಯೋಜಿಸಿಕೊಳ್ಳುತ್ತದೋ ಅದೇ ರೀತಿ ನಮ್ಮ ಶಾಸನಸಭೆಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದು ಅತಿ ಅವಶ್ಯಕ ಎನ್ನುವುದು ನಿರ್ವಿವಾದ. ಹಾಗಾದರೆ ಮಾತ್ರ ಶಾಸನಸಭೆಯ ನಡವಳಿಕೆಗಳು ಅರ್ಥಪೂರ್ಣವಾಗಬಹುದು. ಇದರ ಬಗ್ಗೆ ಸುಧಾರಣೆ ಅಗತ್ಯ ಅನಿವಾರ್ಯ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಲ್ಲವಾದರೆ ಶ್ರೀ ಸಾಮಾನ್ಯನಿಗೆ ಶಾಸನಸಭೆಗಳ ಬಗ್ಗೆ ಜಿಗುಪ್ಸೆ ಬರಬಹುದಾದಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಬಹುದೇನೋ ಎನ್ನುವ ಅನುಮಾನ ಬಾರದೆ ವಿಧಿಯಿಲ್ಲ.

ಹಾಗೆಯೇ ಸಭೆಯನ್ನು ಕರೆಯುವ ಬಗ್ಗೆ ಸಭಾಧ್ಯಕ್ಷರ ಜೊತೆ ಔಪಚಾರಿಕವಾಗಿಯೋ ಅನೌಪಚಾರಿಕವಾಗಿಯೋ ಚರ್ಚೆ ಮಾಡುವುದರಿಂದ ಸಂಸದೀಯ ಪ್ರಜ್ಞಾವ್ಯವಸ್ಥೆಯ ಕಿಮ್ಮತ್ತು ಇನ್ನೂ ಹೆಚ್ಚಾಗಬಹುದೆಂಬ ಆಶಯವನ್ನು ವ್ಯಕ್ತಪಡಿಸಲು ನಾನು ಇಚ್ಛೆಪಡುತ್ತೇನೆ. ವಿಧಾನಸಭಾಧ್ಯಕ್ಷರುಗಳ ಸಮ್ಮೇಳನ ಕನಿಷ್ಟ ವರ್ಷಕ್ಕೆ 75ರಿಂದ 100 ದಿನಗಳ ಕಾಲ ಅಧಿವೇಶನ ನಡೆಯಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಹಾಗೂ ಅದನ್ನು ತೀರ್ಮಾನ ತೆಗೆದುಕೊಂಡಿದೆ. ಈ ಸಮಯದಲ್ಲಿ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರೊ. ನಂಜುಂಡಸ್ವಾಮಿಯವರು ಹೌಸ್ ಆಫ್ ಕಾಮನ್ಸ್‌ನ ನಡವಳಿಕೆಗಳ ಬಗ್ಗೆ ಸಭೆಯ ಮನ ಸೆಳೆದಿದ್ದಾರೆ. ಹೌಸ್ ಆಫ್ ಕಾಮನ್ಸ್, ಅದರ ಕಾರ್ಯವಿಧಾನ, ಅಲ್ಲಿಯ ಕಾರ್ಯವಿಧಾನ, ಅಲ್ಲಿನ ಪರಿಸರ, ಅಲ್ಲಿನ ಸಭೆಯ ನಡವಳಿಕೆಗಳು ಹಾಗೂ ಆ ಸಾರ್ವಜನಿಕ ಸೂಕ್ಷ್ಮ ಸಂವೇದನೆ ನಮ್ಮಲ್ಲಿ ಇದೆಯೇ ಎಂಬ ಬಗ್ಗೆ ನನಗೆ ದೊರೆತಿರುವ ಉತ್ತರ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಮಾತ್ರ. ನಾನು ಈ ಸದನದ ವಿನಮ್ರ ಸೇವಕ. ಮಾನ್ಯ ಸದಸ್ಯರ ಅನಿಸಿಕೆಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅತಿ ಶೀಘ್ರದಲ್ಲಿ ಮತ್ತೆ ಈ ಸದನದ ಅಧಿವೇಶನವನ್ನೂ ಕರೆಯುವ ಸೂಚನೆಯನ್ನು ಮಾನ್ಯ ಸಭಾ ನಾಯಕರು ಈಗ ಸದನದ ಮುಂದೆ ಕೊಟ್ಟಿರುವ ಹಿನ್ನೆಲೆಯಲ್ಲಿ ಈ ವಿಚಾರಕ್ಕೆ ವಿದಾಯ ಹೇಳೋಣ.

ಶ್ರೀ ಬಿ.ಎಸ್. ಎಡಿಯೂರಪ್ಪ : ಇವರು 6 ತಿಂಗಳಿಗೆ ಮುಂಚೆ ಅಧಿವೇಶನ ಕರೆಯುವುದಿಲ್ಲ. ಉದ್ದೇಶಪೂರ್ವಕವಾಗಿ ಇನ್ನೂ 6 ತಿಂಗಳು ಅವರ ಉಳಿದುಕೊಳ್ಳುವುದಕ್ಕೆ ಮಾಡಿರುವ ತಂತ್ರ. ಮುಖ್ಯಮಂತ್ರಿಗಳು ತಮ್ಮ ಜೊತೇನೂ ಚರ್ಚೆ ಮಾಡಿಲ್ಲ......

ಅಧ್ಯಕ್ಷರು : ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

(ಈ ಹಂತದಲ್ಲೇ ಬಿಜೆಪಿಯ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಕಾವೇರಿ ನ್ಯಾಯ ಮಂಡಲಿಯನ್ನು ಬಹಿಷ್ಕರಿಸಬೇಕೆಂದು ನಾವು ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡಿದ್ದೇವೆ. ಮತ್ತು ನ್ಯಾಯ ಮಂಡಲಿ ಸದಸ್ಯರ ಬಗ್ಗೆ, ಸದಸ್ಯರ ಬಗ್ಗೆ, ಅವರ ನಡವಳಿಕೆ ಬಗ್ಗೆ ನಮ್ಮ ರಾಜ್ಯದ ಹೈಕೋರ್ಟಿನಲ್ಲಿ ಒಂದು ಕೇಸ್ ಕೂಡ ಇವತ್ತು ನಡೆಯುತ್ತಿದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ತಮ್ಮನ್ನು ಕರೆಯುತ್ತೇನೆ ಕೂತ್ಕೊಳ್ಳಿ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮೂವ್ ಮಾಡಿಬಿಡಲಿ. ಆಮೇಲೆ ಕರೆಯುತ್ತೇನೆ. ಕಾಗದಪತ್ರಗಳನ್ನು ಇಟ್ಟುಬಿಡಲಿ.

(ಸಭೆಯ ಮುಂದಿಡಲಾದ ಪತ್ರಗಳು)

I. ಶ್ರೀ ಎಸ್. ಬಂಗಾರಪ್ಪ : (ಮುಖ್ಯಮಂತ್ರಿ) ರವರು : ಅಧ್ಯಕ್ಷರೇ ಭಾರತ ಸಂವಿಧಾನದ ಅನುಚ್ಛೇದ 213 (2)ನೇ ಕಲಮಿನ ಮೇರೆಗೆ ;